ಐಕ್ಯರಂಗ

(ವಾರ ಪತ್ರಿಕೆ)

ಭಾರತ ಕಮ್ಯುನಿಸ್ಟ್ ಪಕ್ಷ[ಮಾರ್ಕ್ಸ್‌ವಾದಿ]ಕರ್ನಾಟಕ ರಾಜ್ಯ ಸಮಿತಿಯ ಮುಖಪತ್ರಿಕೆ

ಸಂಪುಟ 5 | ಸಂಚಿಕೆ 16 | ಏಪ್ರಿಲ್ 17, 1983 | ಬೆಲೆ 60 ಪೈಸೆ

ತೀವ್ರಗಾಮೀ ಶಕ್ತಿಗಳನ್ನು ಸೋಲಿಸಿ

ಪಂಜಾಬ್ ಜನತೆಗೆ ಕೇಂದ್ರ ಸಮಿತಿಯ ಕರೆ

ಏಪ್ರಿಲ್ 4ರಂದು ಪಂಜಾಬ್‌ನಲ್ಲಿ ಅಕಾಲಿ ಚಳುವಳಿಗಾರರ ಮೇಲೆ ಪೋಲೀಸರು ಗೋಲಿಬಾರ್ ಮತ್ತು ಲಾಠೀ ಚಾರ್ಜುಗಳನ್ನು ನಡೆಸಿ 26 ಮಂದಿಯನ್ನು ಆಹುತಿ ತೆಗೆದುಕೊಂಡು ನೂರಾರು ಮಂದಿಯನ್ನು ಗಾಯಗೊಳಿಸಿರುವುದನ್ನು ಭಾರತ ಕಮ್ಯುನಿಸ್ಟ್ ಪಕ್ಷ (ಮಾರ್ಕ್ಸ್‌ವಾದಿ)ದ ಕೇಂದ್ರ ಸಮಿತಿ ಬಲವಾಗಿ ಖಂಡಿಸಿದೆ.

ಪೋಲಿಸರು ನಡೆಸಿರುವ ಗೋಲಿಬಾರ್ ಮತ್ತು ಲಾಠಿ ಚಾರ್ಜ್ ಬಗ್ಗೆ ನ್ಯಾಯಾಂಗ ತನಿಖೆ ನಡೆಸಬೇಕೆಂದು ಕೇಂದ್ರ ಸಮಿತಿ ಒತ್ತಾಯಿಸಿದೆ.

ಎಲ್ಲಾ ವಿರೋಧ ಪಕ್ಷಗಳೂ ನೀಡಿದ್ದ ಸೂಚನೆಯ ಪ್ರಕಾರ ಸರ್ಕಾರವು ಅಕಾಲಿ ನಾಯಕರೊಂದಿಗೆ ಮಾತುಕತೆಯನ್ನು ಪುನರಾರಂಭಿಸಿದ್ದ ಪಕ್ಷದಲ್ಲಿ ಈ ದುರಂತಕರ ಬೆಳವಣಿಗೆಯನ್ನು ತಪ್ಪಿಸಬಹುದಾಗಿತ್ತು. ತ್ರಿಪಕ್ಷೀಯ ಮಾತುಕತೆಗಳ ಮೂಲಕ ಕೆಲವು ಅಡೆತಡೆಗಳನ್ನು ನಿವಾರಿಸಿಕೊಂಡು ಮುಖ್ಯ ಸಮಸ್ಯೆಗೆ ಪರಿಹಾರ ಹುಡುಕುವುದು ಸಾಧ್ಯವಿತ್ತೆಂಬುದು ಎಲ್ಲರಿಗೂ ತಿಳಿದ ವಿಚಾರವಾಗಿದೆ. ಆದರೆ ಕೇಂದ್ರ ಸರ್ಕಾರ ಇದಕ್ಕೆ ಬದಲಾಗಿ ಅಕಾಲಿಗಳ ನಡುವೆ ಬಿಕ್ಕಟ್ಟನ್ನು ಸೃಷ್ಟಿಸುವ ಉದ್ದೇಶದಿಂದಾಗಿ, ಅಕಾಲಿ ಬೇಡಿಕೆಗಳ ಕುರಿತು ಏಕಪಕ್ಷೀಯ ಧೋರಣೆಯನ್ನು ಅನುಸರಿಸಿದೆ. ಇದು ಪರಿಸ್ಥಿತಿಯನ್ನು ಮತ್ತಷ್ಟು ಹದಗೆಡಿಸುವುದರೊಂದಿಗೆ ರಾಜ್ಯದ ಶಾಂತಿಯನ್ನು ಭಗ್ನಗೊಳಿಸುವಂತಹ ಸಿಖ್ ತೀವ್ರಗಾಮಿಗಳಿಗೆ ಸಹಾಯವನ್ನುಂಟು ಮಾಡಿತು.

ಸರ್ಕಾರದ ಈ ತಪ್ಪು ಕ್ರಮಗಳಿಂದಾಗಿ ಮತ್ತು ಹಿಂದೂ–ಸಿಖ್ ಕೋಮುವಾದಿಗಳ ವಿಷಪೂರಿತ ಪ್ರಚಾರಗಳಿಂದಾಗಿ ಗಡಿ ರಾಜ್ಯವಾದ ಪಂಜಾಬ್‌ನಲ್ಲಿ ಕೋಮು ವೈರುಧ್ಯಗಳು ತಲೆದೋರಿ ಪಂಜಾಬಿ ಜನತೆಯ ಒಗ್ಗಟನ್ನು ಮುರಿದು ಪ್ರತ್ಯೇಕತಾವಾದೀ ಶಕ್ತಿಗಳು ಬೆಳೆಯುವಂತಹ ವಾತಾವರಣ ಸೃಷ್ಟಿಯಾಗುತ್ತಿವೆ. ಆಡಳಿತ ಕೂಡ ಕುಸಿದು ಬಿದ್ದಿದೆ.

ಅಮೇರಿಕನ್ ಸಾಮ್ರಾಜ್ಯಶಾಹಿಗಳು ಒಂದು ಕಡೆ ಪಾಕಿಸ್ತಾನಿ ಮಿಲಿಟರಿ ಸರ್ವಾಧಿಕಾರಿಗಳಿಗೆ ಶಸ್ತ್ರಾಸ್ತ್ರ ಸರಬರಾಜು ಮಾಡುತ್ತಾ ಮತ್ತೊಂದು ಕಡೆ ನಮ್ಮ ದೇಶದ ಬಳಗೆ ಅಭದ್ರತೆಯನ್ನು ಸೃಷ್ಟಿಸುತ್ತಿರುವ ಈ ಸಂದರ್ಭದಲ್ಲಿ ಇಂಥದೊಂದು ಪರಿಸ್ಥಿತಿಯನ್ನು ಪಂಜಾಬ್‌ನಲ್ಲಿ ಬೆಳೆಯಲು ಅವಕಾಶ ನೀಡಿರುವುದು ಕಾಂಗ್ರೆಸ್ (ಐ) ಆಡಳಿತಗಾರರ ದಿವಾಳಿಕೋರ ನೀತಿಯನ್ನೂ ದೇಶದ ಐಕ್ಯತೆ ಮತ್ತು ಸಮಗ್ರತೆಯನ್ನು ರಕ್ಷಿಸುವಲ್ಲಿ ಅವರು ವಿಫಲರಾಗಿರುವುದನ್ನು ಎತ್ತಿತೋರಿಸುತ್ತದೆ.

ಪಂಜಾಬ್‌ನಲ್ಲಿ ಹಿಂದೆಂದೂ ಉದ್ಭವಿಸಿರದಂತಹ ಅಪಾಯಕಾರೀ ಪರಿಸ್ಥಿತಿ ಸೃಷ್ಟಿಯಾಗಿರುವುದಕ್ಕೆ ಕೇಂದ್ರ ಸಮಿತಿ ತನ್ನ ತೀವ್ರ ಕಳವಳ ವ್ಯಕ್ತಪಡಿಸಿದೆ. ತೀವ್ರಗಾಮಿಗಳು ಈ ಪರಿಸ್ಥಿತಿಯನ್ನು ಉಪಯೋಗಿಸಿಕೊಂಡು ಅಕಾಲಿಗಳ ಮಧ್ಯೆ ದ್ವೇಷವನ್ನು ಸೃಷ್ಟಿಸಿ, ಶಾಂತಿ ಸಮಾಧಾನವನ್ನು, ಕೋಮು ಸೌಹಾರ್ದತೆಯನ್ನು ಮುರಿದಿಕ್ಕುವ ಪ್ರಯತ್ನವನ್ನು ಮುಂದುವರಿಸುತ್ತಿದ್ದಾರೆ.

ತೀವ್ರಗಾಮಿಗಳು ಹರಡುತ್ತಿರುವ ಹಿಂಸಾಕೃತ್ಯಗಳನ್ನು ಖಂಡಿಸಿ ಪಂಜಾಬ್ ಜನತೆಯ ಒಗ್ಗಟ್ಟನ್ನು ಕಾಪಾಡಲು ಸಹಕರಿಸಬೇಕೆಂದು ಕೇಂದ್ರ ಸಮಿತಿಯು ಅಕಾಲಿ ನಾಯಕರಿಗೆ ಮನವಿ ಮಾಡಿದೆ. ಇದರಲ್ಲೇನಾದರೂ ಅಕಾಲಿ ನಾಯಕರು ವಿಫಲರಾದ ಪಕ್ಷದಲ್ಲಿ ಅವರ ನಿಜಸ್ವರೂಪ ಬಯಲಾಗುತ್ತದೆ. ಈಗ ಅಕಾಲಿಗಳ

(8ನೇ ಪುಟ ನೋಡಿ)

ಮೇ ವಿಶೇಷಾಂಕ ಕುರಿತು

'ಐಕ್ಯರಂಗ' ಮೇ ವಿಶೇಷಾಂಕ ಮೇ ಎರಡನೇ ವಾರದಲ್ಲಿ ಪ್ರಕಟವಾಗುತ್ತದೆ.

ಸಾಮಾಜಿಕ—ಆರ್ಥಿಕ, ರಾಜಕೀಯ ಹಾಗೂ ಸಾಂಸ್ಕೃತಿಕ ಅಂಶಗಳನ್ನು ಕುರಿತು ಲೇಖನಗಳನ್ನು ಪ್ರಕಟಿಸಲಾಗುತ್ತದೆ. ವಿಶೇಷಾಂಕವು ಕಥೆ, ಕವನ ಮತ್ತಿತರ ಬರಹಗಳನ್ನೂ ಒಳಗೊಳ್ಳುತ್ತದೆ.

ವಿಶೇಷಾಂಕಕ್ಕೆ ಲೇಖನ, ಕಥೆ, ಕವನ ಇತ್ಯಾದಿಗಳನ್ನು ಕಳುಹಿಸಬಯಸುವ ಗೆಳೆಯರು ಮೇ 1ನೇ ತಾರೀಖಿನ ಒಳಗೆ ನಮಗೆ ಕಳುಹಿಸಬೇಕೆಂದು ವಿನಂತಿ.

ಏಜೆನ್ಸಿದಾರರು ತಮಗೆ ಅಗತ್ಯವಿರುವಷ್ಟು ಪ್ರತಿಗಳಿಗಾಗಿ ಮುಂಚಿತವಾಗಿ ನಮಗೆ ತಿಳಿಸಬೇಕೆಂದು ಕೋರುತ್ತೇವೆ.

ವ್ಯವಸ್ಥಾಪಕ

ಸಂಪಾದಕೀಯ :

ನ್ಯಾಯಾಂಗದಲ್ಲಿ ಜಾತಿ ಮತ್ತು ರಾಜಕೀಯವೇ ?

ಕರ್ನಾಟಕ ಹೈಕೋರ್ಟಿನ ಶ್ರೇಷ್ಠ ನ್ಯಾಯಾಧೀಶ ಕೆ. ಭೀಮಯ್ಯನವರು ಏಪ್ರಿಲ್ 10ರಂದು ನಿವೃತ್ತಿಯಾದರು. ಪ್ರಥಮ ದಲಿತ ಶ್ರೇಷ್ಠ ನ್ಯಾಯಾಧೀಶರಾದವರು ಭೀಮಯ್ಯನವರು. ದುರಾದೃಷ್ಟದಿಂದ ತಾವು ನಿವೃತ್ತರಾಗುವ ಕೆಲವೇ ದಿವಸಗಳ ಮುಂಚೆ ಜಾತೀಯತೆ ಮತ್ತು ರಾಜಕಾರಣ ಪವಿತ್ರವೆಂದು ಪರಿಗಣಿಸಲ್ಪಡುತ್ತಿರುವ ಹೈಕೋರ್ಟನ್ನು ಪುಲೀನಗೊಳಿಸುವಂತಾಯಿತು.

ತಾವು ನಡೆಸುತ್ತಿರುವ ಖಟ್ಲೆಗಳಲ್ಲಿ ಪ್ರತಿವಾದಿ ಪರವಕೀಲರಿಗೆ ವಾದಮಾಡಲು ಅವಕಾಶ ಕೊಡುತ್ತಿಲ್ಲ. "ಕೆಲವೇ ವಕೀಲರಿಗೆ ಮುಖ್ಯ ನ್ಯಾಯಾಧೀಶರು ಬೆಂಬಲ ನೀಡುತ್ತಿದ್ದು, ಸ್ಥಾಪಿತ ಪದ್ಧತಿಗೆ ವ್ಯತಿರಿಕ್ತವಾಗಿ ಅವರು ನ್ಯಾಯಾಲಯದ ಕಾರ್ಯಕಲಾಪಗಳನ್ನು ನಿರ್ವಹಿಸುತ್ತಿದ್ದಾರೆ, ಇದರಿಂದಾಗಿ ಕಕ್ಷಿಗಾರರಲ್ಲಿ ಮತ್ತು ಸಾರ್ವಜನಿಕರಲ್ಲಿ ತೀವ್ರ ಪ್ರತಿಭಟನೆ ಉಂಟಾಗುತ್ತಿದೆ ಎಂಬ ಆರೋಪ ಭೀಮಯ್ಯನವರ ಮೇಲೆ ಹೊರಿಸಲಾಗಿದೆ.

ನ್ಯಾಯಾಧೀಶರು ದೇವರ ಸಮಾನವೆಂದು ದೇವರ ಮೇಲೆ ವಿಶ್ವಾಸ ಇದ್ದವರು ಹೇಳುವ ಹಾಗೆಯೇ ರೂಢಿಯಲ್ಲಿರುವ ಮಾತು. ಹಾಗೆಯೇ ನ್ಯಾಯಾಲಯಗಳೆಲ್ಲ ದೇಗುಲಗಳೆಂಬ ಪ್ರತೀತಿ ಚಾಲನೆಯಲ್ಲಿದೆ. ಆದರೆ ಬಂಡವಾಳಶಾಹಿ ಸಮಾಜದಲ್ಲಿ ಎಲ್ಲವೂ ಕುಲಹೀನವಾದರೂ, ಅದರಲ್ಲೂ ಕೆಲವು ಅಪವಾದಗಳಿವೆ. ಪಕ್ಷದ ಧೋರಣೆ ಕಾರ್ಯಕ್ರಮಗಳಿಗಿಂತಲೂ, ಜಾತಿ, ಮತ, ಧರ್ಮಗಳಿಂದಲೇ ಹೆಚ್ಚು ಮತಗಳಿಸಲು ಸಾಧ್ಯವೆಂಬ ಮಂತ್ರ ಬಲವಂತವಾದಾಗ ಇಂದಿರಾಗಾಂಧಿ ಆ ಭೂಬಾಣವನ್ನೇ ಉಪಯೋಗಿಸುತ್ತಿದ್ದಾರೆ, ಆ ಶಕ್ತಿಗಳಿಗೆ ಹೆಚ್ಚು ಪ್ರೋತ್ಸಾಹ ನೀಡುತ್ತಿದ್ದಾರೆ. ಹೀಗಾಗಿ ಇತ್ತೀಚಿನ ವರ್ಷಗಳಲ್ಲಿ ಕಾಂಗ್ರೆ, ಬಿ.ಜೆ.ಪಿ, ಮುಸ್ಲಿಂ ಲೀಗ್‌ಗಳಂತೆ ಪಕ್ಷಗಳೆಲ್ಲ, ಜಾತಿ, ಮತ, ದಲಿತ ಸಮಿತಿ, ಜಮಾಯಿತ್, ವಿಶ್ವ ಹಿಂದೂ ಪರಿಷತ್‌ಗಳಂತ ಜಾತೀಯ ಮತೀಯ ಸಂಸ್ಥೆ, ಗುಂಪುಗಳಿಗೆ ಪ್ರೋತ್ಸಾಹ ನೀಡುತ್ತಾ ಬಂದಿದ್ದಾರೆ.

ಈಗ ಪ್ರತಿಯೊಂದು ಘಟನೆಯಲ್ಲೂ ಜಾತಿ ಮತ್ತು ಧರ್ಮ ಸುಲಭವಾಗಿ ಪ್ರಾಧಾನ್ಯತೆ ಪಡೆದು ಇಡೀ ಸಮಾಜವನ್ನೇ ಕಲುಷಿತಗೊಳಿಸುತ್ತಿರುವುದನ್ನು ನೋಡುತ್ತಿದ್ದೇವೆ.

ಶ್ರೇಷ್ಠ ನ್ಯಾಯಾಧೀಶರಾದ ಭೀಮಯ್ಯನವರ ನಡವಳಿಕೆಯ ಕುರಿತು ಎದ್ದಿರುವ ಬಿರುಗಾಳಿಯೇ ಇದಕ್ಕೆ ಸಾಕ್ಷಿಯಾಗಿದೆ.

ಹಿಂದುಳಿದ ವರ್ಗದ ವ್ಯಕ್ತಿಯೊಬ್ಬರು ಕರ್ನಾಟಕದ ಹೈಕೋರ್ಟಿನ ಶ್ರೇಷ್ಠ ನ್ಯಾಯಾಧೀಶರಾಗಿ ನೇಮಿಸಲ್ಪಟ್ಟಿದ್ದರೂ, ಇದು ಸ್ವಾಗತಾರ್ಹ. ಚಾತುರ್ವರ್ಣ್ಯ ನಮ್ಮ ಸಮಾಜದಲ್ಲಿ ಇನ್ನೂ ಆಳವಾಗಿ ಬೇರೂರಿರುವಾಗ ಇದಕ್ಕೆ ಮಹತ್ವ ಬರುವುದು ಸಹಜ. ಆದರೆ ಅಧಿಕಾರಿಗಳಾಗಲೀ, ನ್ಯಾಯಾಧೀಶರಾಗಲೀ, ಮಂತ್ರಿಗಳಾಗಲಿ, ತಮ್ಮ ಅಧಿಕಾರ ಸ್ಥಾನ ಸ್ವೀಕರಿಸಿದನಂತರ "ಜಾತಿ ಮನುಷ್ಯ"ನಾಗಿ ಉಳಿಯುವುದಿಲ್ಲ. ಆ ಸ್ಥಾನದ ಪಾವಿತ್ರ್ಯತೆಯನ್ನು ಉಳಿಸಿಕೊಂಡು, ಸಮಾಜದಲ್ಲಿಯ ಎಲ್ಲ ವ್ಯಕ್ತಿಗಳ ಪ್ರತಿನಿಧಿಯಾಗಿಯೇ ಕರ್ತವ್ಯ ನಿರ್ವಹಿಸಬೇಕಾಗುತ್ತದೆ. ಅಂಥ ಪವಿತ್ರ ಕರ್ತವ್ಯದಲ್ಲಿ ತಪ್ಪಿದಾಗ ಅಂಥವರು ಸಾರ್ವಜನಿಕ ಟೀಕೆಗೆ ಪಾತ್ರರಾಗುತ್ತಾರೆ. ಆಗ ಜಾತಿ, ಮತ, ಧರ್ಮಗಳೆಲ್ಲ ಅಡ್ಡ ಬರಬಾರದು.

ಭೀಮಯ್ಯನವರು ದಲಿತರಾಗಿದ್ದರೂ, ಅವರು ದಲಿತರ ಪುರಸ್ಕೃತರಾಗಿ ಹೈಕೋರ್ಟಿನ ಉಚ್ಚಸ್ಥಾನವನ್ನು ಸ್ವೀಕರಿಸಿಲ್ಲ. ಉತ್ತಮ ನ್ಯಾಯಾಧೀಶರೆಂಬ ಕಾರಣದಿಂದಲೇ ಆ ಸ್ಥಾನವನ್ನೇರಿದ್ದಾರೆ. ನ್ಯಾಯಾಧೀಶ ಭೀಮಯ್ಯನವರು ಮುಖ್ಯ ನ್ಯಾಯಾಧೀಶರ ಕುರ್ಚಿಯಲ್ಲಿ ಕೂತಾಗ ದಲಿತ ಭೀಮಯ್ಯನವರಾಗುವುದಿಲ್ಲ. ಉತ್ತಮ ನ್ಯಾಯವಾದಿ ಭೀಮಯ್ಯನವರಾಗುತ್ತಾರೆ. ನ್ಯಾಯಪೀಠದಲ್ಲಿದ್ದಾಗ ಅವರ ವರ್ತನೆ, ಕಾರ್ಯಪದ್ಧತಿಯಲ್ಲೇನಾದರೂ ತಪ್ಪಾದರೆ ನ್ಯಾಯಾಧೀಶ ಭೀಮಯ್ಯನವರು ತಪ್ಪುಮಾಡಿದಂತಾಗುತ್ತದೆ. ಹಾಗಿರುವಾಗ ಇತ್ತೀಚಿಗೆ ನಡೆದ ಪ್ರಕರಣದಲ್ಲಿ ರಾಜಕೀಯ ಜಾತಿಗಳನ್ನು ಸೇರಿಸಿ ಚಳುವಳಿ ಮಾಡುವುದು ನ್ಯಾಯಾಧೀಶ ಭೀಮಯ್ಯನವರ ಘನತೆಗೆ ಧಕ್ಕೆ ತರುವಂತಾಗುತ್ತಲ್ಲದೆ ಮತ್ತೇನಲ್ಲ.

ಶತಮಾನಗಳಿಂದಲೂ ದಲಿತರು ತುಳಿಯಲ್ಪಟ್ಟವರೇ. ಈಗ ಕೆಲವು ಕಾಲದಿಂದ ಅವರಿಗೆ ಶಿಕ್ಷಣ, ನೌಕರಿಗಳು ಲಭ್ಯವಾಗುತ್ತಿವೆ. ಇದರಲ್ಲಿ ಸಮಾನತೆ ಬರಬೇಕಾದರೆ ಇನ್ನೂ ಎಷ್ಟೋ ವರ್ಷಗಳು ಗತಿಸಬೇಕು. ಅದೆಲ್ಲ ನಿರ್ಮಾಮವಾಗಬೇಕಾದರೆ ಬಂಡವಾಳಶಾಹಿ ಸಮಾಜ ಹೋಗಿ ಸಮತಾವಾದಿ ಸಮಾಜ ಉದಯಿಸಬೇಕು.

8ನೇ ಪುಟ ನೋಡಿ

ಸಿ. ಐ. ಟಿ. ಯು. 5ನೇ ಸಮ್ಮೇಳನಕ್ಕೆ ಜಯವಾಗಲಿ !

ಕಾರ್ಮಿಕರ ಐಕ್ಯತೆ ಚಿರಾಯುವಾಗಲಿ !

ಹೋರಾಟದ ಅಲೆಗಳು ಉಕ್ಕಿ ಹರಿಯಲಿ !

ದೇಶದ ಸಂಪತ್ತನ್ನು ನುಂಗುವವರು ಯಾರು ?

ಕೇಂದ್ರ–ರಾಜ್ಯಗಳ ನಡುವೆ ಸಂಪನ್ಮೂಲ ಹಂಚಿಕೆಯ ವಿವಾದಕ್ಕಿಂತ ಈ ರಾಷ್ಟ್ರದ ಸಂಪತ್ತಿನ ನೆಲೆಯನ್ನು ವಿಸ್ತರಿಸುವುದು ಮುಖ್ಯ ಎಂದು ಪ್ರಧಾನಿ ಇಂದಿರಾಗಾಂಧಿ ಅವರು ಮಾರ್ಚ್ 4ರಂದು ದಿಲ್ಲಿಯಲ್ಲಿ ಕರೆಯಲಾದ ಮುಖ್ಯ ಮಂತ್ರಿಗಳ ಸಭೆಯಲ್ಲಿ ತಿಳಿಸಿದರು.

ರಾಜ್ಯಗಳಿಗೆ ಸಾಕಷ್ಟು ಹಣಬಲವಿಲ್ಲ ಎಂಬುದು ನಿಜ. ಆದರೆ ಕೇಂದ್ರದ ಆರ್ಥಿಕಸ್ಥಿತಿಯೂ ಉತ್ತಮವಾಗಿಲ್ಲ ಎಂದು ಇಂದಿರಾ ಗಾಂಧಿಯವರು ತಿಳಿಸಿ, ಕೃಷಿ ಉತ್ಪಾದನೆ ಹೆಚ್ಚಿಸಿ, ಆಮದಿನ ಮೇಲಿನ ಅವಲಂಬನೆಯನ್ನು ತೆಗೆದುಹಾಕಲು ರಾಜ್ಯಗಳ ಸಹಕಾರ ಬೇಕೆಂದರು.

ಕೇಂದ್ರದ ಆರ್ಥಿಕ ಪರಿಸ್ಥಿತಿ ಉತ್ತಮವಾಗಿಲ್ಲವೆಂದು ಇಂದಿರಾ ಗಾಂಧಿ ಹೇಳುವುದಕ್ಕೆ ಐದು ತಿಂಗಳು ಮುಂಚೆ ದಿಲ್ಲಿಯಲ್ಲಿ ಏಷಿಯಾಡ್ ಆಟಗಳನ್ನು ನಡೆಸುವ ಸಲುವಾಗಿ ರೂ. 1200 ಕೋಟಿ ಖರ್ಚುಮಾಡಲಾಗಿದೆ ಎಂಬುದನ್ನು ನೆನೆಯುವುದು ಅಗತ್ಯ. ಹಾಗೆಯೇ ಕೇಂದ್ರ ಮಂತ್ರಿಗಳ, ಅಧಿಕಾರಿಗಳ ವಿದೇಶೀ ಸಂಚಾರ, ವಿದೇಶಗಳಲ್ಲಿ ನಮ್ಮ ದೇಶದ ಪ್ರತಿನಿಧಿಗಳು ಮಾಡುವ ದುಂದು ವೆಚ್ಚಗಳತ್ತ ಗಮನ ಹರಿಸಲೇಬೇಕು.

ಹಾಗೆಯೇ ಪ್ರಧಾನಿ ಇಂದಿರಾ ಗಾಂಧಿಯವರು ಕೇಂದ್ರ ಸರ್ಕಾರದ ಬಡತನ ಪರಿಸ್ಥಿತಿಯನ್ನು ಮುಖ್ಯ ಮಂತ್ರಿಗಳ ಸಭೆಯಲ್ಲಿ ವಿವರಿಸುತ್ತಿದ್ದಂತೆಯೇ ಸರಕಾರದ ಸಂಪತ್ತನ್ನು ದೋಚುವವರಾರು ಎಂಬ ವಿಷಯ ಕುರಿತು ವಿವರಣೆಯನ್ನು ಲೋಕಸಭೆಯಲ್ಲಿ ಮಂಡಿಸಿರುವುದು ಆಕಸ್ಮಿಕವೆಂದೇ ತಿಳಿಯಬಹುದು. 25 ಲಕ್ಷ ರೂ.ಗಳಿಗೆ ಮಿಕ್ಕಿ ಆದಾಯ ತೆರಿಗೆ ಬಾಕಿ ಉಳಿಸಿಕೊಂಡಿರುವವರು ಕಳೆದ ಹಣಕಾಸು ವರ್ಷದ ಅಂತ್ಯದ ವೇಳೆಗೆ 399 ಮಂದಿ, ಅವರ ಒಟ್ಟು ಬಾಕಿ ಹಣ ರೂ. 327 ಕೋಟಿ ಎಂದು ಲೋಕಸಭೆಗೆ ಹೇಳಲಾಯಿತು. ಅಷ್ಟೇ ಅಲ್ಲದೇ, ದೇಶದಲ್ಲಿ ಒಟ್ಟು 47 ಲಕ್ಷ ಜನ ಆದಾಯ ತೆರಿಗೆ ವ್ಯಾಪ್ತಿಗೆ ಬರಲಿದ್ದು, ಐದು ಲಕ್ಷಕ್ಕೂ ಹೆಚ್ಚಿನ ಆದಾಯ ತೋರಿಸಿರುವವರ ಸಂಖ್ಯೆ ಕೇವಲ 5527 ಎಂದಿರುವುದು ಆಡಿಟರ್ ಜನರಲ್ ಅವರ ವರದಿಯಲ್ಲಿ ತೆರಿಗೆ ತಪ್ಪಿಸಿಕೊಳ್ಳಲು ಕಡಿಮೆ ಆದಾಯ ತೋರಿಸುವ ಪ್ರವೃತ್ತಿ ಬೆಳೆದಿರುವುದನ್ನು ಎತ್ತಿ ತೋರಿಸಿದೆ.

ಇದಕ್ಕಿಂತಲೂ ಆಶ್ಚರ್ಯದಾಯಕವಾದ ಕತೆಯನ್ನು ಕಂಟ್ರೋಲರ್ ಅಫ್ ಆಡಿಟರ್ ಅವರು ಬಯಲಿಗೆಳೆದಿದ್ದಾರೆ. 82 ಮಾರ್ಚ್ ಅಂತ್ಯದ ವರೆಗೆ (ಅಂದರೆ ಒಂದು ವರ್ಷದ ಹಿಂದೆ) ವಸೂಲಾಗದೆ ಉಳಿದಿರುವ ತೆರಿಗೆ ಬಾಕಿ ರೂ. 1510 ಕೋಟಿ. ಇದರಲ್ಲಿ ರೂ. 1239 ಕೋಟಿ ಕಂಪೆನಿ ತೆರಿಗೆ ಸೇರಿದಂತೆ ವರಮಾನ ತೆರಿಗೆ ಬಾಬಿಗೆ ಸೇರಿದ್ದು, ಉಳಿದದ್ದೆಲ್ಲಾ ಸಂಪತ್ತು ತೆರಿಗೆ ಮುಂತಾದವುಗಳ ಬಾಕಿ.

ಈ ರೀತಿ ಗುತ್ತೇದಾರಿ ಬಂಡವಾಳದಾರರಿಂದಲೂ ಅತಿ ದೊಡ್ಡ ಶ್ರೀಮಂತರಿಂದಲೂ ಸಂದಾಯವಾಗಬೇಕಾದ ಕೇಂದ್ರ ಸರ್ಕಾರದ ಕರಬಾಕಿಯನ್ನು ವಸೂಲಿಮಾಡಲು ಕೇಂದ್ರ ಸರಕಾರ ಯಾವುದೇ ಕ್ರಮ ಕೈಗೊಳ್ಳುತ್ತಿಲ್ಲ. ಕೇಂದ್ರ ಮತ್ತು ರಾಜ್ಯ ಸರಕಾರಗಳು ಸಂಪನ್ಮೂಲಗಳನ್ನು ವಿಸ್ತರಿಸಬೇಕೆಂದು ಹೇಳುತ್ತಾರೆ. ರಾಜ್ಯ ಸರಕಾರಗಳು ಬಡಜನರಿಂದ ಒತ್ತಾಯಪೂರ್ವಕ ಕರವಸೂಲಿ ಮಾಡುತ್ತಿವೆ. ಆದರೆ ಕೇಂದ್ರ ಸರ್ಕಾರ ತನ್ನ ವರ್ಗದವರೇ ಆದ ಗುತ್ತೇದಾರಿಗಳಿಂದ ಕರ ಸಂಗ್ರಹಿಸದೆ ರಾಜ್ಯ ಸರ್ಕಾರಗಳಿಗೆ ಬುದ್ಧಿವಾದ ಮಾತುಗಳನ್ನು ಹೇಳುತ್ತಿರುವುದು ಖಂಡನೀಯ.

ದೇಶದ ಹೆಚ್ಚಿನ ಸಂಪನ್ಮೂಲಗಳನ್ನೆಲ್ಲಾ ತಾನೇ ಕೇಂದ್ರೀಕರಿಸಿಕೊಂಡು, ಮನಬಂದಂತೆ ಅದನ್ನು ಖರ್ಚು ಮಾಡುತ್ತಾ, ರಾಜ್ಯಗಳಿಗೆ ಧನ ಸಹಾಯ ಮಾಡುವಾಗ ಅವುಗಳ ಮೇಲೆ ರಾಜಕೀಯ ಒತ್ತಡ ತರಲು ಧನ ಸಹಾಯದ ಕ್ರಮವನ್ನು ಉಪಯೋಗಿಸುವ, ರಾಜ್ಯ ಸರ್ಕಾರಗಳನ್ನು ಪುರಸಭೆ ನಗರ ಸಭೆಗಳಂತೆ ನೋಡುತ್ತಿರುವ ನೀತಿಯ ವಿರುದ್ಧ ಹೋರಾಡುವ ದೃಷ್ಟಿಯಿಂದಲೇ ದಕ್ಷಿಣ ರಾಜ್ಯದ ಮುಖ್ಯ ಮಂತ್ರಿಗಳು ಹೋದ ತಿಂಗಳು ಬೆಂಗಳೂರಿನಲ್ಲಿ ಸಭೆ ಸೇರಿದ್ದಲ್ಲ ಮುಖ್ಯ ಮಂತ್ರಿಗಳ ಒಂದು ಕೌನ್ಸಿಲ್ ರಚಿಸಿ ಹೆಚ್ಚಿನ ಸ್ವಾಯತ್ತತೆ, ಸಂಪನ್ಮೂಲಗಳಲ್ಲಿ ಹೆಚ್ಚಿನ ಪಾಲು ಅದಕ್ಕಾಗಿಯೇ ಆರ್ಥಿಕ ನಿಯೋಗದಲ್ಲಿ ಸರಿಯಾದ ಪ್ರಾತಿನಿಧ್ಯಗಳಿಗಾಗಿ ಹೋರಾಡಲು ನಿರ್ಧಾರ ಮಾಡಿದ್ದಾರೆ. ಕೇಂದ್ರ ಸರ್ಕಾರದ ನೀತಿಯಿಂದಾಗಿ, ದೇಶದಲ್ಲಿ ಬೆಳೆಯುತ್ತಿರುವ ಆರ್ಥಿಕ ಅಸಮಾನತೆ ರಾಜಕೀಯ ಸ್ಥಿತ್ಯಂತರಗಳಿಂದಾಗಿ ದಕ್ಷಿಣ ರಾಜ್ಯಗಳ ಮುಖ್ಯ ಮಂತ್ರಿಗಳ ವಿಚಾರಕ್ಕೆ ಹೆಚ್ಚಿನ ಬೆಂಬಲ ನೀಡುವುದರಲ್ಲಿ ಸಂಶಯವಿಲ್ಲ.

ಕೃಷಿ ಉತ್ಪಾದನೆ ಹೆಚ್ಚಿಸಿರಿ

20 ಅಂಶಗಳ ಕಾರ್ಯಕ್ರಮಗಳ ಅನುಷ್ಠಾನದ ಕುರಿತು ಚರ್ಚಿಸಲು ದಿಲ್ಲಿಯಲ್ಲಿ ಕರೆದ ಮುಖ್ಯ ಮಂತ್ರಿಗಳ ಸಭೆಯಲ್ಲಿ, "ಕೃಷಿ ಉತ್ಪಾದನೆ ಹೆಚ್ಚಿಸಿ ಆಮದಿನ ಮೇಲೆ ಅವಲಂಬಿಸುವುದನ್ನು ತಪ್ಪಿಸಲು" ಸಹಕಾರ ಬೇಕೆಂದು ಕೋರಿದರು.

ರೈತರು ಹೆಚ್ಚು ಆಹಾರ ಧಾನ್ಯ ಬೆಳೆಯಲು ಉತ್ಸುಕರಿಲ್ಲವೇ? ಇದಕ್ಕೆ ಅಡ್ಡಿ ಬರುವವರು ಯಾರು? ಕಳೆದ 35 ವರ್ಷಗಳಿಂದ ದೇಶದಲ್ಲಿ ಆಡಳಿತ ನಡೆಸುತ್ತಿದ್ದರೂ ಕೂಡ, ಜಮೀನ್ದಾರಿ ಪದ್ಧತಿ ನಷ್ಟ ಮಾಡಿ, ದುಡಿಯುವವನೇ ಭೂಮಿಯ ಒಡೆಯನನ್ನಾಗಿ ಮಾಡುವ ಮುಖ್ಯ ಘೋಷಣೆಯನ್ನು — ಸ್ವಾತಂತ್ರ್ಯ ಪೂರ್ವದಲ್ಲಿ ಜನತೆಗಿತ್ತ ಆಶ್ವಾಸನೆಯನ್ನು—ಕಾರ್ಯರೂಪಕ್ಕೆ ತರುವಲ್ಲಿ ಇಂದಿರಾ ಕಾಂಗ್ರೆಸ್ ವಿಫಲಗೊಂಡಿದೆ. ಎರಡನೆಯದಾಗಿ ಭೂಮಿ ಇದ್ದವರಿಗೆ ನೀರು, ಗೊಬ್ಬರ, ಹಣದ ಸಹಾಯ ಸಲಕರಣೆಗಳು—ಇವುಗಳ ವ್ಯವಸ್ಥೆಯಿಲ್ಲ. ಮೂರನೆಯದಾಗಿ ರೈತ ಬೆಳೆಯುವ ಬೆಳೆಗಳಿಗೆ ಯೋಗ್ಯ ಬೆಲೆಯಿಲ್ಲ. ಕೇಂದ್ರ ಸರ್ಕಾರದ ಆರ್ಥಿಕ ನೀತಿಯಿಂದಾಗಿ ಬೇಸಾಯ ಆರ್ಥಿಕವಾಗಿ ಲಾಭದಾಯಕವಲ್ಲವೆಂಬ ಸಂಗತಿ ಕೇಂದ್ರ ಸರ್ಕಾರಕ್ಕೆ ಗೊತ್ತಿದ್ದರೂ ಕೂಡ, ಪಂಜಾಬಿನ ರೈತರು ತಮ್ಮ ಗೋಧಿಗೆ ನ್ಯಾಯಬೆಲೆ ಬೇಡಿದಾಗ, ಅವರ ಬೇಡಿಕೆಯನ್ನು ಒಪ್ಪಿಕೊಳ್ಳದೆ ಹೆಚ್ಚು ಬೆಲೆ ತೆತ್ತು ಅಮೇರಿಕದಿಂದ ಗೋಧಿ ತರಿಸಿಕೊಂಡಿದ್ದ ಇಂದಿರಾ ಗಾಂಧಿ "ಆಮದಿನ ಮೇಲೆ ಅವಲಂಬಿಸುವುದನ್ನು ತಪ್ಪಿಸಲು" ಸಹಕರಿಸಬೇಕೆಂದು ಕೇಳಲು ನಾಚಿಕೆ ಬರುವುದಿಲ್ಲವೇ? ಕಳೆದ ನಾಲ್ಕೈದು ವರ್ಷಗಳಿಂದ ಬೆಲೆಯಿಲ್ಲದ ಕಾರಣ ಪಂಜಾಬ-ಹರಿಯಾಣದ ರೈತರು ಬೆಳೆದ ಉತ್ತಮ ಗೋಧಿ ಮಾರಾಟವಾಗದೆ ಹಾಳಾಗುತ್ತಿರುವುದನ್ನು ಕಣ್ಣಾರೆ ಕಂಡ

ಎನ್. ಕೆ. ಉಪಾಧ್ಯಾಯ

ಇಂದಿರಾ ಗಾಂಧಿ ಅಮೇರಿಕದ ರಾಜಕೀಯ ಒತ್ತಡಕ್ಕೆ ಬಲಿಯಾಗಿ ನಮ್ಮ ರೈತರಿಗೆ ಅಪಾರ ನಷ್ಟವನ್ನುಂಟುಮಾಡಿ ಹಂದಿಗಳೂ ತಿನ್ನದಂತ ಗೋಧಿಯನ್ನು ಅಮೇರಿಕದಿಂದ ತರಿಸಿ ಜನರ ಬಾಯಿಗೆ ತುರುಕಲು ಪ್ರಯತ್ನ ಮಾಡಿದ್ದಾರೆ.

ದೇಶದ ಬೆನ್ನೆಲುಬಾಗಿರುವ ರೈತ ನಮ್ಮ ದೇಶದ ಜನರಿಗೆ ಸಾಕಾಗುವಷ್ಟು ಉತ್ಪಾದನೆ ಮಾಡುವುದಷ್ಟೇ ಅಲ್ಲ, ವಿದೇಶಗಳಿಗೂ ಪೂರೈಸುವಷ್ಟು ಧಾನ್ಯ ಬೆಳೆಯಲು ಶಕ್ತನಾಗಿದ್ದಾನೆ. ಆದರೆ ಇಂದಿರಾ ಕಾಂಗ್ರೆಸ್ಸಿನ ಗುತ್ತೇದಾರಿ ಬಂಡವಾಳದಾರ, ಅಮೇರಿಕಪರ ನೀತಿ ರೈತರ ಬೆನ್ನಿಗೆ ಹೊಡೆಯುತ್ತಿದೆ. ಆದ್ದರಿಂದ ರೈತರಿಗೆ ಇಂದಿರಾ ಸರ್ಕಾರದ ಸಹಾಯ ಬೇಕಿಲ್ಲದೆ, ರೈತರ ಸಹಕಾರವಲ್ಲ. ಕೊನೆಯದಾಗಿ ದಾಸ್ತಾನು ಮಳಿಗೆಗಳು, ಥೋಕ ವ್ಯಾಪಾರಸ್ಥರು, ಸರಕಾರದ ಅಶಾಸ್ತ್ರೀಯ ಲೆವಿ ಪದ್ಧತಿಗಳಿಂದಲೂ ರೈತರಿಗೆ ಅಪಾರ ಹಾನಿಯಾಗುತ್ತಿದೆ. ರೈತ ಮತ್ತು ಗ್ರಾಹಕರ ನಡುವೆ ಬರುತ್ತಿರುವ ಏಜೆಂಟರನ್ನೆಲ್ಲಾ ನಿರ್ನಾಮ ಮಾಡಿದರೆ ಮಾತ್ರ ರೈತರ ಸುಲಿಗೆಯಲ್ಲಿ ಕೆಲವಂಶ ಪರಿಹಾರ ದೊರೆಯಲು ಸಾಧ್ಯ. ರೈತರ ಸಹಕಾರ ಸಂಘಗಳ ಮೂಲಕವೇ ಅಥವಾ ನೇರವಾಗಿ ಸರಕಾರದವರೇ ನ್ಯಾಯ ಬೆಲೆಗೆ ಧಾನ್ಯ ಕೊಳ್ಳುವ ವ್ಯವಸ್ಥೆಯಾಗಬೇಕಾಗಿದೆ. ಈ ರೀತಿ ಹಲವಾರು ವಿಧಗಳಲ್ಲಿ ರೈತರ ಸುಲಿಗೆ ನಡೆಯುತ್ತಿದ್ದು ಅವುಗಳಿಗೆ ಪರಿಹಾರ ಕಂಡುಹಿಡಿದರೆ ರೈತ ವರ್ಗಕ್ಕೆ ಹೆಚ್ಚು ಪ್ರೋತ್ಸಾಹ ಸಿಗುತ್ತದೆ. ಹೆಚ್ಚು ಬೆಳೆ ಬೆಳೆಯಲು ಸಹಾಯವಾಗುತ್ತದೆ. ಇದಕ್ಕೆಲ್ಲ ಸಮಗ್ರ ನೀತಿ ಅಗತ್ಯ. ಅಖಿಲ ಭಾರತ ಕಿಸಾನ ಸಭೆ ಇದರ ಕುರಿತು ಹಲವಾರು ಸೂಚನೆಗಳನ್ನು ಸರ್ಕಾರದ ಮುಂದಿಟ್ಟಿದೆ. ಅವುಗಳನ್ನು ಕಾರ್ಯರೂಪದಲ್ಲಿ ತರುವ ಜವಾಬ್ದಾರಿ ಕೇಂದ್ರ ಸರ್ಕಾರದ್ದಾಗಿದೆ. ಅವುಗಳ ಕುರಿತು ಕ್ರಮ ಕೈಗೊಳ್ಳದೆ ಹೆಚ್ಚು ಆಹಾರ ಬೆಳೆಯಲು ಸಹಕರಿಸಿರೆಂದು ಕೇಳುವುದರಲ್ಲಿ ಅರ್ಥವೇನಿದೆ?

ತುಂಬಿದ ಕಾಂಗ್ರೆ ಥೈಲಿಗಳು ಯಾವಾಗ ಲಭ್ಯ ?

ಸಂಪನ್ಮೂಲಗಳನ್ನೆಲ್ಲಾ ಕೇಂದ್ರೀಕರಿಸಿಕೊಂಡ ಕೇಂದ್ರ ಸರ್ಕಾರ ರಾಜ್ಯಗಳಿಗೆ ಧನ ಸಹಾಯ ಮಾಡಲು ಹಣವಿಲ್ಲವೆಂದು ಹೇಳುತ್ತ ರಾಜ್ಯಗಳ ಅಭಿವೃದ್ಧಿ ಕಾರ್ಯಗಳನ್ನು ಕುಂಠಿತಗೊಳಿಸುತ್ತಿದೆ. ಆದರೆ ತುಂಬಿದ ಥೈಲಿಗಳು ಇಂದಿರಾ ಕಾಂಗ್ರೆಸ್ಸಿನ ಕೇಂದ್ರದಿಂದ ರಾಜ್ಯಗಳಿಗೆ ರವಾನೆಯಾಗುತ್ತಿವೆ, ಯಾವಾಗ ಗೊತ್ತೆ? [illegible] ನೀರಾವರಿ ಯೋಜನೆಗಳಿಗಾಗಿ ಅಲ್ಲ, ಬರಗಾಲ, ನೀರಿನ ಸಮಸ್ಯೆಗಳಿಗಾಗಿ ಅಲ್ಲ—ವಿರೋಧಿ ಪಕ್ಷಗಳ ಸರಕಾರಗಳನ್ನು ಉರುಳಿಸುವುದಕ್ಕಾಗಿ ಮಾತ್ರ.

"ಇತ್ತೀಚೆಗೆ ರಾಜ್ಯ ವಿಧಾನ ಸಭೆಯಿಂದ ವಿಧಾನ ಪರಿಷತ್ತಿಗೆ ನಡೆದ ಚುನಾವಣೆಯಲ್ಲಿ ಜನತಾ ಅಭ್ಯರ್ಥಿಗಳನ್ನು ಸೋಲಿಸಿ ತಮ್ಮ ಮಂತ್ರಿ ಮಂಡಲವನ್ನು ಪದಚ್ಯುತಗೊಳಿಸಲು ಕಾಂಗ್ರೆ ದೆಹಲಿಯಿಂದ ತನ್ನ ನಾಯಕರನ್ನು "ಹಣದ ಚೀಲಗಳೊಂದಿಗೆ" ಬೆಂಗಳೂರಿಗೆ ಕಳುಹಿಸಿತ್ತೆಂದು" ಕರ್ನಾಟಕದ ಮುಖ್ಯಮಂತ್ರಿ ರಾಮಕೃಷ್ಣ ಹೆಗಡೆಯವರು ಆಪಾದಿಸಿದ್ದಾರೆ. ಜನವರಿ ತಿಂಗಳಲ್ಲಿ ವಿಧಾನ ಸಭೆಯ ಚುನಾವಣೆಯ ಫಲಿತಾಂಶ ಹೊರಬಿದ್ದ ನಂತರವೂ ಕೂಡ ಕೇಂದ್ರದ ಕ್ರೀಡಾ ಮಂತ್ರಿ ತುಂಬಿದ ಚೀಲಗಳೊಂದಿಗೆ ಕುಮಾರ ಕೃಪಾದಲ್ಲೇ ಮೀನು ಹಿಡಿಯುವ ಹೊಂಚಿನಲ್ಲೇ ಇದ್ದರೆಂದು ಎಲ್ಲರಿಗೂ ಗೊತ್ತು. ತಪಸೆಯಂಥ ಗವರ್ನರು ಬೆಂಗಳೂರಿನಲ್ಲಿರುತ್ತಿದ್ದರೆ ಬೂಟಾಸಿಂಗನಿಗೆ ಮೀನು ಹಿಡಿಯಲು ಅವಕಾಶಮಾಡಿಕೊಟ್ಟು ಹರಿಯಾಣದಂತೆಯೇ ಅಲ್ಪಮತದ ಕಾಂಗ್ರೆ ಸರ್ಕಾರ ಕರ್ನಾಟಕದಲ್ಲೂ ಸ್ಥಾಪನೆಯಾಗುವಂತೆ ಮಾಡುತ್ತಿದ್ದರು. ಜನವರಿಯಲ್ಲಿ ಮಣ್ಣು ನೆಕ್ಕಿ ಹೋಗಿದ್ದರೂ ಕೂಡ ಬಂಗಾರಪ್ಪನಂತವರ ಒಡಕು ನೀತಿ, ಕುಚೇಷ್ಟೆಗಳಿಂದ ಪ್ರೋತ್ಸಾಹಗೊಂಡ ಕಾಂಗ್ರೆನ ಕೇಂದ್ರ ಮುಖಂಡತ್ವ ವಿಧಾನ ಪರಿಷತ್ತಿಗೆ ನಡೆಯುತ್ತಿದ್ದ ಚುನಾವಣೆಯಲ್ಲಿ ಜನತಾ ಅಭ್ಯರ್ಥಿಗಳನ್ನು ಸೋಲಿಸಲಿಕ್ಕಾಗಿ ಶ್ರೀ ಜಾಫರ್ ಶರೀಫ್, ಕೃಷ್ಣಪ್ಪ, ಮಲ್ಲಣ್ಣ ಇವರುಗಳಂಥ ಹಿರಿಯ ಯೋಧರ ದಂಡನ್ನೇ ಕಳುಹಿಸಿಕೊಟ್ಟಿತ್ತಲ್ಲದೆ, ಮಹಾರಾಷ್ಟ್ರ ಏಕೀಕರಣ ಸಮಿತಿಯ ಐವರು ಸದಸ್ಯರನ್ನು ಒಲಿಸಿಕೊಳ್ಳುವ ಸಲುವಾಗಿ ಹಾಗೆಯೇ ಸಾಧ್ಯವಾದರೆ ಇತರರ ಮೇಲೂ ಪ್ರಭಾವ ಬೀರಲು ಶಾಲಿನೀಬಾಯಿ ಪಾಟೀಲರನ್ನೂ ಕಳುಹಿಸಿಕೊಟ್ಟಿತು. ಇಷ್ಟು ವರ್ಷ ಹೊನ್ನು–ಹೆಣ್ಣಿನ ಬಲೆಗೆ ಬಿದ್ದಿದ್ದ ಕರ್ನಾಟಕದ ಜನತೆ ಈಗ ಎಚ್ಚರಗೊಂಡಿದ್ದಾರೆ. ವ್ಯಾಗನ್ ತುಂಬಿ ಹೊನ್ನು–ಹೆಣ್ಣು ಬಂದರೂ ಕೂಡ ಇಂದಿರಾ ಕಾಂಗ್ರೆಸ್ಸನ್ನು [illegible] ಅಧಿಕಾರಕ್ಕೆ [illegible] ದೆಂಬ ಸಂಗತಿ ಕಾಂಗ್ರೆ ಮುಖಂಡರಿಗೆ ತಿಳಿದಂತೆ [illegible] ಬಂಗಾರಪ್ಪನವರೂ [illegible] ಪ್ರಧಾನ ಮಂತ್ರಿ [illegible] ಮಂತ್ರಿ ಕುರ್ಚಿಗಳಿಗಾಗಿ ನಾಲಿಗೆ ಚಾಚಿಕೊಂಡಿರುತ್ತಾರೆಂದು ತಿಳಿದಿರುವುದು ತಪ್ಪೆಂಬುದನ್ನು ಸದ್ಯಕ್ಕಾದರೂ ಕರ್ನಾಟಕದ [illegible] ತೋರಿಸಿಕೊಟ್ಟಿರುವುದು ಅಭಿನಂದನೀಯ. ಈ ಘಟನೆ ಬಂಗಾರಪ್ಪನವರ ಕಣ್ಣು ತೆರೆಸಬೇಕಾಗಿತ್ತು. ಕಣ್ಣು ಮುಚ್ಚಿಯೇ ಆಟ ಆಡುತ್ತೇನೆಂದು ಅವರ ಹಟ. [illegible] ಬಂಗಾರಪ್ಪನವರು ಮಂತ್ರಿ [illegible]

ಅಂತೂ [illegible] ಪರಿಹಾರಕ್ಕೆ ಕೇಂದ್ರದಿಂದ ಸಾಕಷ್ಟು [illegible] ರಾಮಕೃಷ್ಣ ಹೆಗಡೆ ಸರ್ಕಾರವನ್ನು [illegible] ಹಣ ಚೀಲಗಳೊಂದಿಗೆ [illegible] ಇದಕ್ಕಿಂತ ನಾಚಿಕೆಗೇಡಿನ ಕೆಲಸ ಬೇರೆ ಯಾವುದಿದೆ? ನೀವೇ ವಿಚಾರ ಮಾಡಿರಿ.

ಸಿ. ಐ. ಟಿ. ಯು. ೫ನೇ ಸಮ್ಮೇಳನ

'ಕಾರ್ಮಿಕ ಸಂಘಗಳು ತಮ್ಮ ಸಮಕಾಲೀನ ಜವಾಬ್ದಾರಿ ನಿರ್ವಹಿಸಲಿ'

ಏಪ್ರಿಲ್ 13 ರಿಂದ 17ರ ವರೆಗೆ ಕಾನ್‌ಪುರದಲ್ಲಿ ನಡೆದ ಸಿ.ಐ.ಟಿ.ಯು. ವಿನ 5ನೇ ಸಮ್ಮೇಳನದಲ್ಲಿ ಕಾಂ|| ಬಿ. ಟಿ. ರಣದಿವೆಯವರು ಮಾಡಿದ ಅಧ್ಯಕ್ಷ ಭಾಷಣದಿಂದ ಆರಿಸಿದ ಕೆಲವು ಭಾಗಗಳನ್ನು ಇಲ್ಲಿ ಕೊಡಲಾಗಿದೆ.

ಬಿ. ಟಿ. ರಣದಿವೆ

ಆರಂಭದಲ್ಲಿ ಕಾ| ರಣದಿವೆಯವರು ಸಿ.ಪಿ.ಐ.(ಎಂ)ನ ಪಾಲಿಟ್‌ಬ್ಯೂರೋ ಸದಸ್ಯರಾಗಿದ್ದ ಕಾ| ಪ್ರಮೋದ್ ದಾಸ್‌ಗುಪ್ತ, ಹಾಗೂ ಕಾ| ಎ. ಬಾಲಸುಬ್ರಮಣಿಯಮ್, ಸೋವಿಯತ್ ಸಂಘದ ಅಧ್ಯಕ್ಷರೂ, ಸೋವಿಯತ್ ಸಂಘದ ಕಮ್ಯುನಿಸ್ಟ್ ಪಕ್ಷದ ಕಾರ್ಯದರ್ಶಿಗಳಾಗಿದ್ದ ಕಾ| ಬ್ರೆಜ್ನೆವ್ ಮತ್ತು ಸಿ. ಐ. ಟಿ. ಯು. ನ ಕಳೆದ ಸಮ್ಮೇಳನದ ನಂತರ ಪೋಲೀಸ್ ಗುಂಡಿಗೆ ಬಲಿಯಾಗಿ ಹುತಾತ್ಮರಾದ ಸಿ. ಐ. ಟಿ. ಯು. ನ ಹಲವಾರು ಸದಸ್ಯರು ಹಾಗೂ ನಾಯಕರಿಗೆ ಶ್ರದ್ಧಾಂಜಲಿ ಅರ್ಪಿಸಿದ್ದಾರೆ.

ಸೋವಿಯತ್ ಸಂಘ, ಜನತಾ ಚೀನಾ, ಯುಗೋಸ್ಲಾವಿಯಾ ಹಾಗೂ ಕಾರ್ಮಿಕ ಸಂಘಗಳ ಜಾಗತಿಕ ಮಹಾ ಸಂಘ (WFTU) ದ ಸೋದರ ಪ್ರತಿನಿಧಿಗಳನ್ನು ಸ್ವಾಗತಿಸುತ್ತಾ "ಪಾಕಿಸ್ತಾನದ ಕಾರ್ಮಿಕ ಚುಳುವಳಿಯ ಪ್ರತಿನಿಧಿಗಳು ಯಾರೂ ಈ ಸಮ್ಮೇಳನದಲ್ಲಿ ಭಾಗವಹಿಸದಿರಲು ನಾವು ಕಾರಣರಲ್ಲ, ಅವರೂ ಕಾರಣರಲ್ಲ. ಜನರಲ್ ಜಿಯಾ ಭಾರತದಲ್ಲಿ ಶೃಂಗ ಸಭೆಯಲ್ಲಿ ಭಾಗವಹಿಸಿ, ತೃತೀಯ ಜಗತ್ತಿನ ಸಮಸ್ಯೆಗಳನ್ನು ಚರ್ಚಿಸಬಹುದು. ಆದರೆ ಪಾಕಿಸ್ತಾನದ ಕಾರ್ಮಿಕ ಸಂಘಗಳು ಭಾರತದಲ್ಲಿ ಕಾರ್ಮಿಕರ ಸಮ್ಮೇಳನದಲ್ಲಿ ಭಾಗವಹಿಸುವಂತಿಲ್ಲ. ಲಷ್ಕರೀ ಶಾಸನ ತಿದ್ದುಪಡಿ ಮಾಡಿದ ಅಲಿಪ್ತ ನೀತಿಯೆಂದರೆ ಇದೇ" ಎಂದು ಟೀಕಿಸಿದ್ದಾರೆ.

ಬಂಡವಾಳಶಾಹೀ ಬಿಕ್ಕಟ್ಟು

ಈಗ ಮೂರು ಕೋಟಿಗೂ ಮಿಕ್ಕ ನಿರುದ್ಯೋಗಿಗಳನ್ನು ಹೊಂದಿರುವ ಮುಂದುವರಿದ ಬಂಡವಾಳಶಾಹೀ ದೇಶಗಳ ಬಿಕ್ಕಟ್ಟಿನ ಪರಿಸ್ಥಿತಿಯ ಬಗ್ಗೆ ಕಾರ್ಲ್ ಮಾರ್ಕ್ಸ್ ಏನು ಹೇಳಿದ್ದರೋ, ಅದು ಅವರ ಮರಣ ಶತಾಬ್ದಿಯ ವರ್ಷದಲ್ಲಿ ಆಗಲೇ ನಿಜವಾಗಿದೆ. ಅದೇ ರೀತಿ ಸಮಾಜವಾದೀ ಜಗತ್ತಿನ ಸಾಧನೆಗಳೂ ಸಮಾಜವಾದೀ ಸಮಾಜದಲ್ಲಿ ಮಾನವನ ಪ್ರಗತಿಯ ಬಗ್ಗೆ ಮಾರ್ಕ್ಸ್ ವಿಚಾರಗಳನ್ನು ಸಾಬೀತುಗೊಳಿಸಿವೆ. ಕಾರ್ಮಿಕರ, ಅದೇ ರೀತಿ ಶ್ರಮಜೀವಿ ಮಾನವ ಕುಲದ ವಿಮೋಚನೆಯಾಗಬೇಕಾದರೆ ಅದು ಉತ್ಪಾದನಾ ವಿಧಾನಗಳ ಖಾಸಗೀ ಒಡೆತನವನ್ನು ಅಂತ್ಯಗೊಳಿಸದೆ ಸಾಧ್ಯವಿಲ್ಲ ಎಂದು ಮಾರ್ಕ್ಸ್ ಕಾರ್ಮಿಕವರ್ಗಕ್ಕೆ ಬೋಧಿಸಿದ್ದರು. ಈ ಬೋಧನೆಗಳನುಸಾರವಾಗಿಯೇ ಜಗತ್ತಿನ ಮೂರರಲ್ಲೊಂದು ಭಾಗದ ಜನತೆ ಬಡತನ, ನಿರುದ್ಯೋಗದಿಂದ ಮುಕ್ತಿ ಪಡೆದಿದ್ದಾರೆ."

ಬಿಕ್ಕಟ್ಟಿನಿಂದ ಪಾರಾಗಲು ಬೇರೆ ದಾರಿಕಾಣದ ಸಾಮ್ರಾಜ್ಯಶಾಹಿಗಳು ಮಾರಕಾಸ್ತ್ರಗಳ ಉತ್ಪಾದನೆಗೆ ಬಿಲಿಯಗಟ್ಟಲೆ ಡಾಲರ್‌ಗಳನ್ನು ಸುರಿದು ಸೋವಿಯತ್ ಸಂಘ ಹಾಗೂ ಜಗತ್ತಿನ ಮಾನವರೆಲ್ಲರ ವಿರುದ್ಧ ನ್ಯೂಕ್ಲಿಯರ್ ಯುದ್ಧಕ್ಕೆ ತಯಾರಿ ನಡೆಸುತ್ತಿರುವುದರಿಂದ ಜಾಗತಿಕ ಶಾಂತಿಗೆ ಒದಗಿರುವ ತೀವ್ರ ಗಂಡಾಂತರದ ಕುರಿತಾಗಿ ಮಾತನಾಡುತ್ತಾ ಕಾಮ್ರೇಡ್ ರಣದಿವೆಯವರು ಅಂತರ ರಾಷ್ಟ್ರೀಯ ಒಗ್ಗಟ್ಟಿಗಾಗಿ ಕಾರ್ಮಿಕ ವರ್ಗಕ್ಕೆ ಕಾರ್ಲ್ ಮಾರ್ಕ್ಸ್ ನೀಡಿದ ಸ್ಫೂರ್ತಿದಾಯಕ ಕರೆಯನ್ನು ನೆನಪಿಸಿ 'ನಾವು ರೀಗನ್ ಆಡಳಿತದ ಈ ಯುದ್ಧೋನ್ಮಾದದ ವಿರುದ್ಧ ನಮ್ಮ ಪ್ರತಿಭಟನೆಯ ಧ್ವನಿಯೆತ್ತಬೇಕು" ಎಂದು ಕರೆನೀಡಿದ್ದಾರೆ. ಈ ಸಂದರ್ಭದಲ್ಲಿ ಯೂರೋಪ್ ಹಾಗೂ ಅಮೆರಿಕದ ಜನತೆಯ ಪ್ರತಿಭಟನೆ ತೀವ್ರ ಸ್ವರೂಪಗೊಳ್ಳುತ್ತಿದ್ದರೂ ಭಾರತದಲ್ಲಿ ಅಂತರಾಷ್ಟ್ರೀಯತೆಯ, ಯುದ್ಧಾಪಾಯದ ಪ್ರಜ್ಞೆ ತುಂಬಾ ದುರ್ಬಲವಾಗಿದೆಯೆಂದ ಅವರು "ಇತರ ಕೇಂದ್ರ ಕಾರ್ಮಿಕ ಸಂಘಟನೆಗಳ ಜನರನ್ನು ಸೇರಿಸಿಕೊಂಡು ಯುದ್ಧವಿರೋಧೀ ಚಳುವಳಿಯನ್ನು ಮುಂದುವರಿಸಲೇ ಬೇಕಾಗಿರುವುದು ನಮ್ಮ ಹೊಣೆ. ಯುದ್ಧ ಸಿಡಿದರೆ ಅದು ಭಾರತದಲ್ಲಿನ ಮನೆಮಾರುಗಳಿಗೂ ತಟ್ಟದೇ ಇರುವುದಿಲ್ಲ; ನಾವು ಉದಾಸೀನರಾದರೆ ಅದರಿಂದ ನಾವೇ ನಾಶವಾಗಬೇಕಾದೀತು ಅಥವಾ ಗುಲಾಮರಾಗಬೇಕಾದೀತು ಎಂದು ಕಾರ್ಮಿಕರಿಗೆ ನೀವು ಮುನ್ನೆಚ್ಚರಿಕೆ ನೀಡಬೇಕು" ಎಂದಿದ್ದಾರೆ.

ಅಲಿಪ್ತ ಶೃಂಗಸಭೆ

"ಕಳೆದ ತಿಂಗಳು ನಮ್ಮ ದೇಶದಲ್ಲಿ ನಡೆದ ಅಲಿಪ್ತ ಶೃಂಗಸಭೆ ಒಂದು ಮಹತ್ವದ ಅಂತರಾಷ್ಟ್ರೀಯಘಟನೆ.... ಈ ಶಕ್ತಿ ಪ್ರಭಾವಶಾಲೀ ಶಕ್ತಿಯಲ್ಲಿ ಭಿನ್ನಾಭಿಪ್ರಾಯ ಹಬ್ಬಿಸಲು ಕೆಲವು ಶಕ್ತಿಗಳು ಪ್ರಯತ್ನಿಸಿದರೂ ಸಾಮ್ರಾಜ್ಯಶಾಹಿ ಹಾಗೂ ಮೂರನೇ ಜಗತ್ತಿನ ನಡುವೆ ಹೆಚ್ಚುತ್ತಿರುವ ಘರ್ಷಣೆ ಆರ್ಥಿಕ ಸನ್ನಿವೇಶ, ಯುದ್ಧಾಪಾಯ, ಮೂರನೇ ಜಗತ್ತಿನ ದೇಶಗಳೆಲ್ಲಾ ಅನುಭವಿಸುತ್ತಿರುವ ಸಾಲದ ಹೊರೆ, ಲಂಚ ರುಷುವತ್ತುಗಳ ಮೂಲಕ ಕೆಲವನ್ನು ಎತ್ತಿಕಟ್ಟುವಲ್ಲಿ ಸಾಮ್ರಾಜ್ಯ ಶಾಹಿಗಳ ವೈಫಲ್ಯ ಮತ್ತು ಸಾಮ್ರಾಜ್ಯ ಶಾಹಿಗಳ ವಿರುದ್ಧ ಹಲವಾರು ದೇಶಗಳಲ್ಲಿ ಭುಗಿಲೆದ್ದಿರುವ ಜನತೆಯ ಸಿಟ್ಟು ಇವೆಲ್ಲಾ ಈ ದೇಶಗಳನ್ನು ಒಟ್ಟಿಗೆ ತಂದವು"........ ಜಗತ್ತು ಕೆಲವರ ಕುಟಿಲತಂತ್ರಗಳ ಬಗ್ಗೆ ಜಾಗೃತವಾಗುತ್ತಿದೆ. ಕೈಗೊಂಬೆಗಳಂತಿರುವ ಆಳರಸರ ಮೂಲಕ ಸುಲಭವಾಗಿ ಮನಬಂದಂತೆ ವರ್ತಿಸಲು ಇನ್ನು ಮುಂದೆ ಸಾಧ್ಯವಾಗುವುದಿಲ್ಲ ಎಂದು ಈ ಸಭೆ ಸಾಮ್ರಾಜ್ಯಶಾಹಿಗಳಿಗೆ ಮುನ್ನೆಚ್ಚರಿಕೆ ನೀಡಿದೆ" ಎಂದು ಹೇಳಿದ ಕಾ| ರಣದಿವೆ ಇದರಲ್ಲಿ ಭಾರತ ಸರಕಾರದ ಪಾತ್ರವನ್ನು ವಿವರಿಸುತ್ತಾ "ಅದು ದೇಶದ ಸಾಮ್ರಾಜ್ಯಶಾಹಿ-ವಿರೋಧೀ ರಾಷ್ಟ್ರೀಯ ಹಿತಾಸಕ್ತಿಗಳನ್ನು ಪ್ರತಿಬಿಂಬಿಸುತ್ತಿತ್ತು. ಅದೇ ವೇಳೆ ಕಾಂಗ್ರೆಸ್‌ನ ಮೂರು ದಶಕಗಳ ಆಳ್ವಿಕೆ ಸಾಮ್ರಾಜ್ಯಶಾಹಿ-ವಿರೋಧಿ ಪ್ರಜ್ಞೆಯನ್ನು ನಿರ್ಜೀವಗೊಳಿಸಿದೆ.

ಆದ್ದರಿಂದ ಸಾಮ್ರಾಜ್ಯಶಾಹಿ-ವಿರೋಧಭಾವ ಜನಸಾಮಾನ್ಯರ ಆಸ್ತಿಯಾಗದಿದ್ದರೆ ಅಲಿಪ್ತ ಚಳುವಳಿಯ ನಿಜವಾದ ಶಕ್ತಿಯ ಅನುಭವ ಆಗಲಾರದು" ಎಂದು ಅವರು ತಿಳಿಸಿದರು.

ಚುನಾವಣಾ ಫಲಿತಾಂಶ

"ಜನಸಾಮಾನ್ಯರು ಆಗಾಗ ದಿಕ್ಕುಗೆಡಿಸುವ ಹಲವು ತಂತ್ರಗಳಿಗೆ ಬಲಿಯಾದರೂ ಕೂಡ ಕಾಂಗ್ರೆಸ್ (ಐ) ಸರ್ಕಾರದ ಜನವಿರೋಧೀ ಧೋರಣೆಗಳ ವಿರುದ್ಧ ಹೋರಾಟದಲ್ಲಿ ಮುನ್ನಡೆ ಸಾಧಿಸುತ್ತಿದ್ದಾರೆ" ಎಂದು ತ್ರಿಪುರಾ, ಆಂಧ್ರಪ್ರದೇಶ ಹಾಗೂ ಕರ್ನಾಟಕದ ವಿಧಾನಸಭಾ ಚುನಾವಣೆಗಳಲ್ಲಿ ಕಾಂಗ್ರೆಸ್(ಐ) ನ ಸೋಲಿನ ಬಗ್ಗೆ ಕಾ| ರಣದಿವೆ ವಿಮರ್ಶಿಸಿದ್ದಾರೆ. ಅದರ ಜತೆಗೆ ಸಂಯುಕ್ತ ಕಾರ್ಮಿಕ ಚಳುವಳಿಗೆ ಈ ರೀತಿ ಎಚ್ಚರಿಕೆ ನೀಡಿದ್ದಾರೆ —"ಮುಂಬರುವ ದಿನಗಳಲ್ಲಿ ಜನತೆ ಕಾಂಗ್ರೆಸ್(ಐ) ನ್ನು ಬಿಟ್ಟು ಹೊಸ ನಾಯಕತ್ವಕ್ಕಾಗಿ ಹುಡುಕಾಡಲಾರಂಭಿಸಿದಾಗ ಅವರ ಅಸಂತೃಪ್ತಿಯನ್ನು ಎಡಪಂಥದೆಡೆಗೆ ಕ್ರೋಢೀಕರಿಸಲು ಸಾಧ್ಯವಾಗಬೇಕಾದರೆ ಕಾರ್ಮಿಕ ಸಂಘಗಳು ಈ ಬಗ್ಗೆ ತೀವ್ರ ಆಸಕ್ತಿ ತಳೆಯಬೇಕು. ಇಲ್ಲವಾದರೆ ವರ್ಗ ದೃಷ್ಟಿಯಲ್ಲಿ ಏನೇನೂ ವ್ಯತ್ಯಾಸವಿಲ್ಲದ ಪಕ್ಷಗಳ ನಡುವೆಯೇ ಜನಸಾಮಾನ್ಯರು ಅಲೆದಾಡುತ್ತಾ ಇರಬೇಕಾದೀತು."

ವಿಚ್ಛಿದ್ರಕಾರಿ ಶಕ್ತಿಗಳು

ಅಸ್ಸಾಂನಲ್ಲಿ ಪ್ರತ್ಯೇಕತಾವಾದದ ಅಪಾಯದ ಬಗ್ಗೆ ವಿವರವಾದ ಪರಿಶೀಲನೆ ನಡೆಸಿದ ಅಧ್ಯಕ್ಷೀಯ ಭಾಷಣದಲ್ಲಿ, ಹೇಗೆ ಸಮಸ್ಯೆಯನ್ನು ವಿಪರೀತಕ್ಕೊಯ್ದು ರಕ್ತಪಾತಕ್ಕೆಡೆಯಾಯಿತು, ಬೂರ್ಜ್ವಾ ವಿರೋಧ ಪಕ್ಷಗಳು ಹಾಗೂ ಪತ್ರಿಕೆಗಳು ಹೇಗೆ ಬೇಜವಾಬ್ದಾರಿತನ ಪ್ರದರ್ಶಿಸಿದವು, ಅಮೆರಿಕನ್ ಸಾಮ್ರಾಜ್ಯಶಾಹಿಗಳ ಕೈವಾಡವೇನು, ಕಾಂಗ್ರೆಸ್ (ಐ) ನ ಪಾತ್ರವೇನು, ಕೇವಲ ಎಡ ಪಕ್ಷಗಳ ಹಾಗೂ ಎಡ ಸಂಘಟನೆಗಳು ಮಾತ್ರ ಹೇಗೆ ರಾಷ್ಟ್ರೀಯ ಸಮಗ್ರತೆಗಾಗಿ ತಮ್ಮ ಜೀವವನ್ನೇ ಪಣವೊಡ್ಡಿ ಹೋರಾಡಿದವು ಎಂಬುದನ್ನು ತಿಳಿಸಿ, "ಅಸ್ಸಾಂನ ನಮ್ಮ ಈ ಸಂಗಾತಿಗಳು ಕಾರ್ಮಿಕ ವರ್ಗದ ಚೇತನಕ್ಕೆ ಅನುಗುಣವಾಗಿ ದೇಶದ ಐಕ್ಯತೆ, ಶ್ರಮಿಕರ ಐಕ್ಯತೆ ವರ್ಗದ ಐಕ್ಯತೆಗಾಗಿ ಧೈರ್ಯದಿಂದ ಹೋರಾಡಿದ್ದಕ್ಕಾಗಿ ಅವರಿಗೆ ನಮ್ಮ ಹಾರ್ದಿಕ ಮೆಚ್ಚುಗೆಯನ್ನು ವ್ಯಕ್ತಪಡಿಸಬೇಕು" ಎಂದು ಕರೆನೀಡಲಾಗಿದೆ.

ಅದೇ ರೀತಿ ಪಂಜಾಬಿನಲ್ಲೂ ಸಮಸ್ಯೆ ಹದಗೆಡುವವರೆಗೂ ಅದನ್ನು ಪರಿಹರಿಸುವ ಯೋಚನೆ ಮಾಡದ ಕಾಂಗ್ರೆಸ್(ಐ) ಸರಕಾರ ಈಗ ಸಿಖ್ಖರ ಕೆಲವು ಕೋಮು ಸ್ವರೂಪದ ಬೇಡಿಕೆಗಳನ್ನು ಕಡೆಗಣಿಸುತ್ತಾ ಬರುತ್ತಿದೆ ಇದಕ್ಕೆ ವ್ಯತಿರಿಕ್ತವಾಗಿ ತ್ರಿಪುರಾದ ಎಡರಂಗ ಸರಕಾರ ಜನತೆಯ ಐಕ್ಯವನ್ನು ಕಾಯ್ದುಕೊಳ್ಳುವಲ್ಲಿ ಯಶಸ್ವಿಯಾಗಿದೆ. ಕಾಂಗ್ರೆಸ್(ಐ) ಪ್ರತ್ಯೇಕತಾವಾದಿಗಳೊಂದಿಗೆ ಹಾಗೂ ಆಮ್ರ ಬಂಗಾಲಿಯಂತಹ ಪ್ರತಿಕ್ರಿಯಾವಾದಿಗಳೊಂದಿಗೆ ಸೇರಿಕೊಂಡರೂ ವಿಚ್ಛಿದ್ರಕಾರೀ ಶಕ್ತಿಗಳು ಕಳೆದ ಚುನಾವಣೆಯಲ್ಲಿ ಸೋಲುಣ್ಣಬೇಕಾಯಿತು.

ಪ್ರತ್ಯೇಕತಾವಾದಿ ಶಕ್ತಿಗಳಲ್ಲದೆ, ನಾವು ಪರಂಪರೆಯಿಂದ ಪಡೆದ ಹಿಂದೂ. ಕೋಮುವಾದ, ಅಲ್ಪಸಂಖ್ಯಾತರ ಪ್ರತ್ಯೇಕತಾಭಾವ, ಹರಿಜನರ ಮೇಲೆ ಅತ್ಯಾಚಾರಗಳು ಇವೆಲ್ಲವುಗಳ ಮೂಲಕ ರಾಷ್ಟ್ರೀಯ ಐಕ್ಯತೆಯನ್ನು ಮುರಿಯಲು, ಕಾರ್ಮಿಕರ ಐಕ್ಯತೆಯನ್ನು ಮುರಿಯಲು ಏನು ಸಾಧ್ಯವೋ ಅವೆಲ್ಲವುಗಳನ್ನು ಪ್ರಯತ್ನಿಸಲಾಗುತ್ತಿದೆ. ನಮ್ಮ ಕಾರ್ಮಿಕ ಸಂಘಗಳು ಈ ಎಲ್ಲಾ ಅಪಾಯವನ್ನು ಮನಗಂಡಿದೆ ಎಂದು ಹೇಳಲು ಸಾಧ್ಯವಿಲ್ಲ. ಆರ್ಥಿಕ ಮಾತ್ರವಲ್ಲದೆ ಇತರ ಮುಖ್ಯ ಸಮಸ್ಯೆಗಳೂ ಬಹಳಷ್ಟು ಕಾರ್ಯಕರ್ತರನ್ನು ಬಾಧಿಸುತ್ತಿವೆ ಎಂಬ ವಾಸ್ತವತೆಯನ್ನು ನಮ್ಮ ಕಾರ್ಮಿಕ ಸಂಘಗಳು ಮಾನ್ಯ ಮಾಡದಿದ್ದರೆ ಅವುಗಳ ಪ್ರಭಾವ ಸಾರ್ವತ್ರಿಕವಾಗದೆ ಪಂಥವಾದೀ ಸಂಘಟನೆಗಳ ಕೈಮೇಲಾಗಬಹುದು ಎಂದು ಕಾರ್ಮಿಕ ಸಂಘಗಳಿಗೆ ಕಾ. ರಣದಿವೆ ಎಚ್ಚರಿಕೆ ನೀಡಿದ್ದಾರೆ.

ಸರ್ವಾಧಿಕಾರ-ವಿರೋಧೀ ಹೋರಾಟ

ಜನತೆಯ ವಿರುದ್ಧ ಸರ್ವಾಧಿಕಾರೀ ಶಕ್ತಿಗಳ ದಾಳಿ ಹೆಚ್ಚುತ್ತಿದೆ. ಶಕ್ತಿಯ ಕೇಂದ್ರೀಕರಣವಾಗುತ್ತಿದೆ. ಸಂಸತ್ತಿನ ಹೆಸರಿನ ಮರೆಯಲ್ಲಿ ಸರ್ವಾಧಿಕಾರೀ ಕ್ರಮ ಕೈಗೊಳ್ಳಲಾಗುತ್ತಿದೆ.

ಸಂಸತ್ತಿನ ಅಧಿಕಾರಗಳನ್ನು ಕಡೆಗಣಿಸಲಾಗುತ್ತಿದೆ. ಉದಾಹರಣೆಗೆ ಈ ವರ್ಷದ ಬಜೆಟ್‌ಗಿಂತ ಮೊದಲೇ ಸಂಸತ್ತಿನ ಅನುಮತಿ ಪಡೆಯದೇನೇ 1300 ಕೋಟಿ ರೂಪಾಯಿಗಳಷ್ಟು ಆರ್ಥಿಕ ಸಂಪನ್ಮೂಲಗಳನ್ನು ಕೇಂದ್ರ ಸರಕಾರ ಕಲ್ಪಿಸಿಕೊಂಡಿದೆ. ಬಜೆಟ್ ಕೂಡಾ ಬೆಲೆ ಏರಿಕೆಗೆ, ನಿರುದ್ಯೋಗ ಹೆಚ್ಚಳಕ್ಕೆ ಪೂರಕವಾಗುವಂತೆ ಇದೆ. ಇವೆಲ್ಲದರ ವಿರುದ್ಧ ಹೋರಾಟಗಳಲ್ಲಿ ಕಾರ್ಮಿಕ ಸಂಘಗಳು ಇತರ ಪ್ರಜಾಪ್ರಭುತ್ವವಾದಿ ಶಕ್ತಿಗಳೊಂದಿಗೆ ಸೇರಬೇಕೆಂದು ಕಾಂ. ರಣದಿವೆ ಕರೆ ನೀಡಿದ್ದಾರೆ,

ನಿರುದ್ಯೋಗ, ವಸತಿ ಸಮಸ್ಯೆ

"ಉದ್ಯೋಗ ವಿನಿಮಯಗಳಲ್ಲಿ ದಾಖಲಾತಿಯ ಸಂಖ್ಯೆ ಆಗಸ್ಟ್ 1982ರಲ್ಲಿ 1.9 ಕೋಟಿಗೇರಿದೆ. ಗ್ರಾಮಾಂತರ ನಿರುದ್ಯೋಗಿಗಳು 4.5 ಕೋಟಿ ಎಂದು ಅಂದಾಜು ಮಾಡಿದೆ. 1985 ರಲ್ಲಿ ನಗರ ಪ್ರದೇಶದ ಕೊಳಗೇರಿಗಳಲ್ಲಿ ವಾಸಿಸುವವರ ಸಂಖ್ಯೆ 3 ಕೋಟಿ ಮೀರಬಹುದೆಂದು ಅಂದಾಜು ಮಾಡಲಾಗಿದೆ. ಸಮಸ್ಯೆಗಳನ್ನು ಪರಿಹರಿಸಲಾರದ ಯೋಜನಾಕಾರರು "ಕೊಳೆಗೇರಿಗಳಿಗೆ ಹೋಗಿ, ಸ್ವಯಂ ಉದ್ಯೋಗ ಆರಂಭಿಸಿ" ಎಂಬ ಪರಿಹಾರ ಸೂಚಿಸುತ್ತಿದ್ದಾರೆ. ಕಾರ್ಮಿಕ ಸಂಘಗಳು ನಿರುದ್ಯೋಗಿಗಳಿಗೆ ತಕ್ಷಣ ಪರಿಹಾರ ನೀಡಲು, ನಿರುದ್ಯೋಗ ಹೆಚ್ಚಳ ತಡೆಯಲು ಸರಕಾರದ ಮೇಲೆ ಒತ್ತಡ ಹೇರಬೇಕು; ಕಾರ್ಮಿಕರನ್ನು ತಿಳಿಗೇಡಿಗಳನ್ನು ದಬ್ಬುವ ಹಂಚಿಕೆಯ ವಿರುದ್ಧ ಹೋರಾಡಬೇಕು.

ಕಾರ್ಮಿಕರ ವೇತನದ ಮೇಲೆ ಕಣ್ಣಿಡಲು, ಹಣದುಬ್ಬರ ಹಾಗೂ ಬಿಕ್ಕಟ್ಟಿನ ಹೊರೆಯನ್ನು ಕಾರ್ಮಿಕರ ಮೇಲೆ ದಾಟಿಸಲು ಸರಕಾರ ಬಿ.ಪಿ.ಇ ಮೂಲಕ ಪ್ರಯತ್ನಿಸಿದ್ದು ನಮಗೆಲ್ಲರಿಗೆ ತಿಳಿದಿದೆ. ಇವರಿಂದ ಧೈರ್ಯ ಪಡೆದ ಖಾಸಗೀ ಉದ್ಯೋಗವತಿಗಳೂ ಬೋನಸ್,ತುಟ್ಟಿಭತ್ಯ ಹಾಗೂ ಕನಿಷ್ಟ ವೇತನವನ್ನು ರದ್ದುಗೊಳಿಸಬೇಕೆಂದು ಒತ್ತಾಯ ಪಡಿಸಲಾರಂಭಿಸಿದ್ದಾರೆ. ಅಂದರೆ ಕಾರ್ಮಿಕರ ವೇತನದ ಮೇಲೆ ಇನ್ನಷ್ಟು ದಾಳಿಗಳು ಬರಲಿವೆ. ಅದನ್ನು ಸುಲಭಗೊಳಿಸಲು ಸರಕಾರ ಹಲವು ಕಾರ್ಮಿಕ-ವಿರೋಧಿ ಶಾಸನಗಳನ್ನು ತರುತ್ತಿದೆ, ಸಮರಶೀಲ ಕಾರ್ಮಿಕ ಸಂಘಗಳ ಬೆಳವಣಿಗೆ

(ಎಂಟನೇ ಪುಟ ನೋಡಿ)

ಮಾರ್ಕ್ಸ್ ಮರಣ ಶತಾಬ್ಧಿ ಲೇಖನ ಮಾಲೆ

ಸಾಮಾಜಿಕ ಬದಲಾವಣೆಯ ಮಾರ್ಕ್ಸ್‌ವಾ

> ಇತಿಹಾಸದ ಭೌತವಾದೀ ಸಿದ್ಧಾಂತ ತತ್ವಶಾಸ್ತ್ರ, ಧ
> ಎಂಬ ವಿರೋಧಿಗಳ ಟೀಕೆ ಹೇಗೆ ಆಧಾರಹೀನ ಎಂದು
> ತೋರಿಸಿಕೊಟ್ಟಿದ್ದಾರೆ.
>
> ಇದೇ ಸೈದ್ಧಾಂತಿಕ ದೃಷ್ಟಿಕೋನದಿಂದ ಭಾರತಿ
> –ಪೂರ್ವ ತತ್ವಗಳಾದ ಮತೀಯತೆ, ಜಾತೀಯತೆ, ಕೋ
> ಪರಿಸ್ಥಿತಿಗಳ ಬಗ್ಗೆ ಬರೆಯುತ್ತಾ, ಇವಕ್ಕೆ ಇಲ್ಲಿ ವಿ
> ವಿಲಕ್ಷಣ ಪರಿಸ್ಥಿತಿಯೇ ಕಾರಣ; ಇಲ್ಲಿ ಬೂರ್ಜ್ವಾ ವರ್ಗ
> ಗಳೊಂದಿಗಾಗಲೀ ಹೋರಾಡಬೇಕಾಗಿ ಬರಲಿಲ್ಲ ಎಂದು

ಲೇಖನ—6

(ಕಳೆದ ಸಂಚಿಕೆಯಿಂದ)

ಅಲ್ಲದೆ ಹಿಂದೊಮ್ಮೆ ಹೇಳುತ್ತಿದ್ದಂತೆ, ಬೂರ್ಜ್ವಾ ವರ್ಗ ಸಾಮ್ರಾಜ್ಯಶಾಹಿಯ ಉಪ ಉತ್ಪತ್ತಿಯಾಗಿ ಉದಯವಾಯಿತು; ಯೂರೋಪಿಯನ್ನರ ಸೇವೆಯಲ್ಲಿದ್ದ (Comprador) ವರ್ಗದಿಂದ, ವಿನಿಮಯ ಮತ್ತು ಲೇವಾದೇವಿ ನಡೆಸುತ್ತಿದ್ದ ವರ್ತಕ ಹಾಗೂ ಇತರರಿಂದ ಉದ್ಭವಗೊಂಡಿತು. ಭೂ ಮಾಲಿಕರು ತಮ್ಮ ಪಾಳೇಗಾರಿ ಶೋಷಣಾ ವಿಧಾನಗಳನ್ನು ಸ್ವಲ್ಪವೂ ಬದಲಿಸಿಕೊಳ್ಳದೇನೆ ಈ ವರ್ಗದ ಭಾಗಿದಾರರಾಗಿದ್ದರು.

ಯೂರೋಪಿನಲ್ಲಿ ಉತ್ಪಾದಕರೂ, ಆಸ್ತಿ ಒಡೆಯರು ಇತ್ಯಾದಿ ವಿಭಾಗಗಳಿಂದ ಬೂರ್ಜ್ವಾಗಳು ಮೂಡಿಬಂದಿದ್ದರೆ, ಭಾರತದಲ್ಲಿ ಮೌಲಿಕವಾಗಿ ಬಹಳ ವರ್ಷಗಳ ವರೆಗೆ ಅವರು ಕೃಷಿ ಹಿತಾಸಕ್ತಿಗಳೊಂದಿಗೆ, ಪಾಳೇಗಾರೀ ಪರ್ತನೆಗಳೊಂದಿಗೆ ಸಂಪರ್ಕ ಇಟ್ಟುಕೊಂಡೇ ಇದ್ದರು. ವರ್ತಕ ವಿಭಾಗದಿಂದ ಉದಯಿಸಿದ, ಕೃಷಿ ಕ್ಷೇತ್ರದ ಊಳಿಗಮಾನ್ಯ ಪ್ರಭುಗಳೊಂದಿಗೆ ಸಂಪರ್ಕ ಇರಿಸಿಕೊಂಡಿದ್ದ ಭಾರತದ ಬೂರ್ಜ್ವಾ ವರ್ಗಕ್ಕೆ ಕೃಷಿ ಕ್ರಾಂತಿ ಅವಶ್ಯಕವೆನಿನಿಸಲಿಲ್ಲ. ಅಷ್ಟೇ ಅಲ್ಲ ಆ ಬಗ್ಗೆ ಅವರಿಗೆ ಭಯವೇ ಇತ್ತು. ವಾಸ್ತವ ಸಂಗತಿಯೆಂದರೆ ಅವರಿಗೆ ಭೂಮಾಲೀಕರ ಬೆಂಬಲ ಬೇಕಾಗಿತ್ತು. ಅಂತಿಮ ಘಳಿಗೆಯವರೆಗೂ ಕಾಂಗ್ರೆಸ್ ಪಕ್ಷ ರಾಜಮಹಾರಾಜರುಗಳ ಆಳ್ವಿಕೆಯನ್ನು ಕೊನೆಗೊಳಿಸಲು ಹಿಂಜರಿಯುತ್ತಿತ್ತು. ಬೇರೆ ಉಪಾಯವೇ ಇಲ್ಲವೆಂದಾದಾಗ ಮಾತ್ರ ಕ್ರಮಕೈಗೊಂಡಿತು. ರೈತರ ಭೂಮಾಲಿಕ ವಿರೋಧೀ ಬೇಡಿಕೆಗಳೂ ಎಂದೂ ಕಾಂಗ್ರೆಸ್ ಕಾರ್ಯಕ್ರಮಗಳಲ್ಲಿ ಕಾಣಿಸಿಕೊಳ್ಳಲಿಲ್ಲ.

ಇದು ಎರಡು ರೀತಿಯ ಪ್ರತಿಫಲ ನೀಡಿತು. ಮೊದಲನೆಯದಾಗಿ ಕೃಷಿ ಕ್ರಾಂತಿಯನ್ನು ತಡೆಹಿಡಿಯಲಾಯಿತು. ಎರಡನೆಯದಾಗಿ, ಹಿಂದೂವಾದ, ಜಾತೀವಾದ, ಕೋಮುವಾದ ಇತ್ಯಾದಿ ಬಂಡವಾಳಶಾಹಿಗಿಂತ ಮೊದಲಿನ ತತ್ವಗಳ ಆರ್ಥಿಕ ತಳಹದಿ ಮೊದಲು ಹೇಗಿತ್ತೋ, ಸುಮಾರಾಗಿ ಹಾಗೇ ಉಳಿಯಿತು.

ಜಾತಿಯ ಮೂಲ ಏನೇ ಆಗಿರಲಿ, ಇಸ್ಲಾಂ ಧರ್ಮ ತಾನು ಉದಯಿಸಿದಾಗ ವಹಿಸಿದ ಕ್ರಾಂತಿಕಾರಿಪಾತ್ರವೇನೇ ಇರಲಿ, ಜಾತೀವಾದ, ಹಿಂದೂ-ಮುಸ್ಲಿಂ ಪ್ರತ್ಯೇಕತಾ ಭಾವನೆ ಹರಡುತ್ತಾ ಹೋಗಲು ಊಳಿಗಮಾನ್ಯ ಕೃಷಿ ಸಂಬಂಧಗಳು, ವ್ಯಾಪಕ ಕೈಗಾರಿಕಾಭಿವೃದ್ಧಿಯ ಅಭಾವ, ತತ್ಪರಿಣಾಮವಾಗಿ ಮತೀಯ ಪ್ರತ್ಯೇಕತೆಯ ಹಿರಿದಾದ ಪಾತ್ರ ಏನೆಂಬುದರ ಬಗ್ಗೆ ವ್ಯಾಪಕ ಅರಿವಿನ ಅಭಾವ ಇವೇ ಕಾರಣ ಎನ್ನುವುದಂತೂ ಸ್ವತಃ ಸಿದ್ಧ.

ತಕ್ಷಣ ಪ್ರಯೋಜನಕಾರಿ ಆದರೂ....

ಪರಿಣಾಮವೇನೆಂದರೇ, ಭಾರತದ ಬೂರ್ಜ್ವಾ ವರ್ಗಕ್ಕೆ ಧರ್ಮ ಹಾಗೂ ಇತರ ಬಂಡವಾಳಶಾಹೀ - ಪೂರ್ವ ತತ್ವವಿಚಾರಗಳ ವಿರುದ್ಧ ಹೋರಾಡಬೇಕೆಂದು ಅನಿಸಲೇ ಇಲ್ಲ. ಅಥವಾ ಪಾಶ್ಚಾತ್ಯ ದೇಶಗಳಲ್ಲಾದಂತೆ ಹೊಸದೊಂದು ಧರ್ಮವನ್ನು ಸ್ಥಾಪಿಸುವ ಅಗತ್ಯವೂ ಅವರಿಗೆ ಕಂಡುಬರಲಿಲ್ಲ. ಹಿಂದೂ "ಸಮಾಜ ಸುಧಾರಣೆ" ಹಾಗೂ "ಹಿಂದೂ-ಮುಸ್ಲಿಂ ಭಾಯೀ ಭಾಯೀ" ಘೋಷಣೆ ಮಾತ್ರದಿಂದಲೇ ಅವರು ಸಂತೃಪ್ತರಾದರು. ಇಬ್ಬರು ಲೇಖಕರು ಈ ಕೆಳಗಿನ ಮಾತನ್ನು ತುಂಬಾ ಚೆನ್ನಾಗಿಯೇ ಹೇಳಿದ್ದಾರೆ :

"ಪೌರ್ವಾತ್ಯದ ಯಾವ ಧರ್ಮವೂ —ಇಸ್ಲಾಂ, ಬೌದ್ಧ ಅಥವಾ ಹಿಂದೂ ಧರ್ಮ ಕೂಡಾ— ತೀವ್ರ ಬೂರ್ಜ್ವಾ ಸುಧಾರಣೆಗೆ ಒಳಗಾಗಲಿಲ್ಲ. ಇದರ ಅರ್ಥ ಕೈಗಾರಿಕಾ ಹಾಗೂ ಗುತ್ತೇದಾರಿ ಬಂಡವಾಳ ಸಮಾಜ ವ್ಯವಸ್ಥೆಯೊಳಗೆ ಆಳವಾಗಿ ಹೊಕ್ಕಾಗ ತೀವ್ರ ಸಾಮಾಜಿಕ ತಿಕ್ಕಾಟಗಳುಂಟಾಗಿ ಹೊಸ ಚಾರಿತ್ರಿಕ ಸನ್ನಿವೇಶ ಏರ್ಪಟ್ಟಾಗ, ಈ ಹೊಸ ವಿದ್ಯಮಾನಕ್ಕೆ ಚಿಕ್ಕ-ಚಿಕ್ಕ ಆಸ್ತಿ ಒಡೆಯರ ಸ್ವಾಭಾವಿಕ ಪ್ರತಿಕ್ರಿಯೆಯಾಗಿ ಸಾಂಪ್ರದಾಯಿಕ ಬಂಡವಾಳ ಶಾಹೀ–ಪೂರ್ವ ಕೋಮುವಾದಿ ಮತೀಯ ಪ್ರಜ್ಞೆ ಪ್ರಕಟಗೊಳ್ಳುತ್ತದೆ". [ಆರ್. ಉಲ್ಯಾನೋವ್‌ಸ್ಕಿ ಮತ್ತು ವಿ. ಪಾವ್ಲೋವ್. Social Sciences, ಮಾಸ್ಕೋ, ನಂ. 4, 1980ರಲ್ಲಿ "The Asian and African Countries: Specific features of development," ಪುಟ 130]

ಈ ಕೊನೆಯ ವಾಕ್ಯ ಜಾತಿ ಮತ್ತು ಕೋಮು ಘರ್ಷಣೆಗಳು ಹೆಚ್ಚೆಚ್ಚು ಪ್ರಕಟಗೊಳ್ಳುತ್ತಿರುವುದನ್ನು ಭಾಗಶಃ ಚೆನ್ನಾಗಿ ವಿವರಿಸುತ್ತದೆ.

ರಾಷ್ಟ್ರೀಯ ಹೋರಾಟದ ಪುನರುತ್ಥಾನವಾದಿ ಮುಂದಾಳುಗಳು ಜನರ ಧಾರ್ಮಿಕ ನಂಬಿಕೆಗಳಿಗೆ ನೀರೆರೆದು ಪೋಷಿಸಿದರೆ ಅದು ಸಾಮ್ರಾಜ್ಯಶಾಹಿಯ ವಿರುದ್ಧ ಹೋರಾಟದಲ್ಲಿ ಒಂದು ಉತ್ತಮ ಅಸ್ತ್ರವಾಗಬಲ್ಲದೆಂದು ಯೋಚಿಸಿದರು. ವಿವಿಧ ಮತ ನಂಬಿಕೆಗಳ ಜನರು ಪರಸ್ಪರ ಕಿತ್ತಾಡಬಾರದು ಎಂಬುದಷ್ಟೇ ಅವರಿಗೆ ಬೇಕಾಗಿತ್ತು. ಎಲ್ಲಾ ಧರ್ಮಗಳನ್ನು ಪರಮ ಪವಿತ್ರವೆಂದು ಭಾವಿಸಿ, ಯಾವುದನ್ನೂ ವಿಮರ್ಶೆಗೆ ಗುರಿಪಡಿಸಬಾರದು ಎಂಬುದು ಅವರ ಆಶಯವಾಗಿತ್ತು. ಧಾರ್ಮಿಕ ತತ್ವಗಳೊಡನೆ ಈ ರೀತಿಯ ರಾಜೀಭಾವವನ್ನು ಅವರು ಸಾಮ್ರಾಜ್ಯಶಾಹಿಯ ವಿರುದ್ಧ ಹೋರಾಡುವ ಆಧುನಿಕಉದ್ದೇಶಕ್ಕೆ ಬಳಸಿಕೊಂಡರು.

ಈ ಧೋರಣೆ ತಕ್ಷಣದ ವರ್ಷಗಳಲ್ಲಿ ಪ್ರಯೋಜನಕಾರಿಯೇನೋ ಆಯಿತು. ಆದರೆ ಅದರ ದೀರ್ಘಕಾಲೀನ ಫಲಿತಾಂಶ ಮಾತ್ರ ವಿಪತ್ಕಾರಿಯಾಯಿತು. ಸಾಂಪ್ರದಾಯ ಶರಣ ಮುಸ್ಲಿಮರು ಬ್ರಿಟಿಷರನ್ನು ತಮ್ಮ ಆಳುವ ಹಕ್ಕನ್ನು ಕಸಿದುಕೊಂಡ ವಂಚಕರೆಂದೇ ಪರಿಗಣಿಸಿದ್ದರು. ಜತೆಗೆ ಕ್ರಿಶ್ಚಿಯನ್ ಧರ್ಮವನ್ನು ವಿರೋಧಿಸುವ ಇಸ್ಲಾಮೀ ಪರಂಪರೆಗೆ ಇವರೂ ಸೇರಿದ್ದರು. ಗಾಂಧೀಜಿಗಿಂತ ಮೊದಲೇ ಇವರು ಪಾಶ್ಚಿಮಾತ್ಯ ನಾಗರಿಕತೆಯನ್ನು, ಅದರೊಂದಿಗೆ ಅದರ ಶಿಕ್ಷಣ ಪದ್ಧತಿಯನ್ನೂ ಕೂಡ ಪಾಪಕರ ಹಾಗೂ ಇಸ್ಲಾಮ್ ವಿರೋಧಿ ಎಂದು ಖಂಡಿಸಿದ್ದರು. ಜನತಂತ್ರವಾದಿ ಆದರ್ಶಗಳಿಗೆ, ವಿಚಾರಗಳಿಗೆ ತನ್ನನ್ನು ತೆರೆದುಕೊಳ್ಳುವ ಆಧುನೀಕರಣದ ಪಗ್ರತಿ ಈ ಕೋಮಿನಲ್ಲಿ ಅತ್ಯಂತ ಮಂದ ಗತಿಯಿಂದ ನಡೆಯಿತು.

ಖಿಲಾಫತ್ ಆಂದೋಲನ ತುರ್ಕಿಸ್ಥಾನದ ಮುಸ್ಲಿಂ ಪ್ರಭುತ್ವಕ್ಕೆ Treaty of Severes ಸಂಧಾನದ ಮೂಲಕ ಮಾಡಿದ ಅನ್ಯಾಯದ ವಿರುದ್ಧ ಮುಸಲ್ಮಾನರ ಪ್ರತಿಭಟನೆಯ ಅಭಿವ್ಯಕ್ತಿಯಾಗಿತ್ತು. ಯುದ್ಧದ ನಂತರದ ದಿನಗಳಲ್ಲಿ ಮುಸ್ಲಿಂ ಜನಸಾಮಾನ್ಯರಲ್ಲಿ ಬೆಳೆದಿದ್ದ ಅತೃಪ್ತಿಯನ್ನು ಕ್ರೋಢೀಕರಿಸುವಲ್ಲಿ ಅದು ನೆರವಾಯಿತು. ಇದು ತುರ್ಕಿಸ್ತಾನದ ಜನತೆಯ ಹಕ್ಕುಗಳ ಉಲ್ಲಂಘನೆಗೆ ಸಲ್ಲಿಸಿದ ಪ್ರತಿಭಟನೆ ಮಾತ್ರವೇ ಆಗಿರಲ್ಲಿಲ್ಲ. ಖಲೀಫರು ಇಸ್ಲಾಂ ಧರ್ಮದ ಆಧ್ಯಾತ್ಮಿಕ ಪ್ರಭುವಾಗಿ ಕಾರ್ಯನಿರ್ವಹಿಸಲು ಅನುವಾಗುವಂತೆ ಅವರ ಸಾಮ್ರಾಟ್ ಪದವಿ ಮತ್ತೆ ಅವರಿಗೆ ಸಿಗುವಂತಾಗಬೇಕೆಂಬುದು ಆಂದೋಲನದ ಬೇಡಿಕೆಯಾಗಿತ್ತು. ಇದರಲ್ಲಿ ಧಾರ್ಮಿಕ ಅಂಶವೇ ಪ್ರಬಲವಾಗಿತ್ತು. ಆದರೆ ಅದು ತನ್ನನ್ನು ಅಸಹಕಾರ ಆಂದೋಲನದ ರಾಷ್ಟ್ರೀಯ ಪ್ರತಿಭಟನೆಯಲ್ಲಿ ವಿಲೀನಗೊಳಿಸಿಕೊಂಡಿತು. ಈ ಬೇಡಿಕೆಗೆ ಬೆಂಬಲ ನೀಡಿ ಗಾಂಧೀಜಿ ಮತ್ತು ರಾಷ್ಟ್ರೀಯ ಕಾಂಗ್ರೆಸ್ ಭಾರತದ ಜನಸಾಮಾನ್ಯರಲ್ಲಿ ಅಭೂತಪೂರ್ವ ಐಕ್ಯಭಾವ ಮೂಡಿಸಿದರು. ಭಯ ವಿಹ್ವಲಗೊಂಡ ಬ್ರಿಟಿಷರಿಗೆ 1857ರ ವಿಮೋಚನಾ ಹೋರಾಟದ ದಿನಗಳು ನೆನಪಿಗೆ ಬರಲಾರಂಭಿಸಿದ್ದವು.

ಸ್ವರಾಜ್ಯ ಎಂದರೆ ಸಂಪೂರ್ಣ ಸ್ವಾತಂತ್ರ್ಯ ಎಂದು ನಿರೂಪಿಸಬೇಕು ಎಂಬ ಬೇಡಿಕೆಯನ್ನು ಮೊತ್ತಮೊದಲು ಇಟ್ಟವರು ಖಿಲಾಫತ್ ನಾಯಕರು. 1921ರಲ್ಲಿ ಕಾಂಗ್ರೆಸ್‌ನ ಅಹಮದಾಬಾದ್ ಅಧಿವೇಶನದಲ್ಲಿ "ಮೌಲಾನ ಹೆಸ್ರತ್ ಮೊಹಾನಿ" ಈ ಬೇಡಿಕೆಯನ್ನು ಮಂಡಿಸಿದರು. ಅದಕ್ಕೆ ವಿರೋಧ ವ್ಯಕ್ತವಾದದ್ದು ಗಾಂಧಿಯವರ ನೇತೃತ್ವದಲ್ಲಿ.

ಅದೇ ರೀತಿ; 1919ರಲ್ಲೇ ಮುಸ್ಲಿಂ ಲೀಗ್ ತನ್ನ ಅಮೃತಸರ ಅಧಿವೇಶನದಲ್ಲಿ 'ಭಾರತೀಯ ಸೇನೆಯನ್ನು ಸೇರಬೇಡಿ' ಎಂದು ಭಾರತೀಯ ಮುಸ್ಲಿಮರಿಗೆ ಕರೆ ನೀಡುವ ಠರಾವನ್ನು ಅಂಗೀಕರಿಸಿತ್ತು. ಜೂನ್ 1922ರಲ್ಲಿ ಲಕ್ನೌನಲ್ಲಿ ನಡೆದ ಖಿಲಾಫತ್ ಹಾಗೂ ಜಮಾತ್–ಎ–ಉಲ್–ಉಲೇಮಾದ ಜಂಟೀ ಅಧಿವೇಶನ "ಕಾಂಗ್ರೆಸ್ ಆಚರಣೆಯಲ್ಲಿ 'ಸ್ವರಾಜ್ಯ' ಪದದ ಸ್ಥಾನದಲ್ಲಿ 'ಸಂಪೂರ್ಣ ಸ್ವಾತಂತ್ರ್ಯ' ಎಂಬ ಪದ ಬಳಸುವುದು ಭಾರತ ಹಾಗೂ ಮುಸ್ಲಿಮರ ಹಿತದೃಷ್ಟಿಯಿಂದ ಅತ್ಯುತ್ತಮ" ಎಂಬ ಠರಾವನ್ನು ಅಂಗೀಕರಿಸಿತು.

ಸಂಪ್ರದಾಯಗಳನ್ನು, ಅಡ್ಡ ಬೇಲಿಗಳನ್ನು ಮುರಿಯುತ್ತಿದ್ದ ಕಾಲವದು. ಆಗಿನ ಭಾರತ ಸರ್ಕಾರದ ಪ್ರಕಟಣೆ (India in 1919–20) ಕೂಡಾ ಈ ರೀತಿ ಟಿಪ್ಪಣಿ ಮಾಡಿದೆ—

"ಹಿಂದೂ ಹಾಗೂ ಮುಸ್ಲಿಮರ ನಡುವೆ ಅಭೂತಪೂರ್ವ ಬಂಧುತ್ವ ಎಲ್ಲೆಡೆ ಕಂಡುಬರುತ್ತಿರುವ ಉತ್ಸಾಹಕರ ವಾತಾವರಣದ ಒಂದು ಗಮನಾರ್ಹ ಲಕ್ಷಣವಾಗಿತ್ತು. ಅವರ ನಾಯಕರ ನಡುವೆ ಒಗ್ಗಟ್ಟು ಆಗಲೇ ಬಹಳ ಸಮಯದಿಂದ ರಾಷ್ಟ್ರೀಯ ರಂಗದಲ್ಲಿ ಒಂದು ಸುನಿಶ್ಚಿತ ಯೋಜನೆಯಾಗಿತ್ತು. ಈ ಸಾರ್ವತ್ರಿಕ ಉತ್ಸಾಹದ ವೇಳೆಯಲ್ಲಿ ಕೆಳಗಿನ ವರ್ಗಗಳೂ ಕೂಡ ಭಿನ್ನಾಭಿಪ್ರಾಯಗಳನ್ನು ಮರೆಯಲು ನಿರ್ಧರಿಸಿದವು. ಬಂಧುತ್ವ ಪ್ರದರ್ಶನದ ವಿಶಿಷ್ಟ ದೃಶ್ಯಗಳು ಕಂಡುಬಂದವು. ಹಿಂದೂಗಳು ಹಾಗೂ ಮುಸ್ಲಿಮರು ಪರಸ್ಪರ ಕೈಯಿಂದ ಸಾರ್ವಜನಿಕವಾಗಿಯೇ ನೀರು ಸ್ವೀಕರಿಸಿದರು.

ಹಿಂದೂ-ಮುಸ್ಲಿಂ ಐಕ್ಯತೆ ಎ
ಕೇಳಿಬರುತ್ತಿದ್ದ ಪ್ರವ
ಘೋಷಣೆಯಾಗಿತ್ತು.
ಮೆರವಣಿಗೆಗಳ ಬ್ಯಾನರುಗ
ಘೋಷವಾಕ್ಯಗಳೂ ಇದ
ಸೂಚಿಸುತ್ತಿದ್ದವು. ನಿಜ ಸ
ಎಂದರೆ ಮಸೀದಿಯ ಬೋ
ಪೀಠದಿಂದ ಉಪದೇಶ ನೀ
ಹಿಂದೂ ನಾಯಕರಿಗೆ ಕರೆ
ಲಾಗಿತ್ತು.

ಉತ್ಸಾಹಭಂಗ –ತಿರುಗು ಬಾಣ

ಆದರೆ ಈ ಬಂಧುತ್ವ ಹ
ಆದನ್ನಾಧರಿಸಿದ ಆಂದೋಲನ
ದಿನ ಉಳಿಯಲಿಲ್ಲ. ರೈತರು
ಮಾಲಿಕರೊಂದಿಗೆ ಬಹಿರಂಗ ಘ
ಗಿಳಿದು ತಮ್ಮೆರಡು ವರ್ಗಗಳ
ವಿನ ಒಪ್ಪಂದಕ್ಕೆ ಸಂಚುಕಾರ
ದೆಯೆಂದು ಕಂಡಾಗ ಕಾಂಗ್ರೆಸ್
ಕಾರಿ ಸಮಿತಿ ಆಂದೋಲನ
ವಾಪಸು ಪಡೆಯುವ ಬಾಡೋ
ನಿರ್ಣಯವನ್ನು ಅಂಗೀಕರಿಸಿ
ಸಾಮಾನ್ಯರ ಉತ್ಸಾಹ
ಗೊಳಿಸಿತು. ಅಲ್ಲದೆ, ಈ ಎ
ಕೋಮುಗಳ ನಡುವಿನ ಐಕ್ಯತೆ,
ಐಕ್ಯತೆಯಾಗಿ — ಹಿಂದೂ ಹ
ಮುಸ್ಲಿಂ ರೈತರ ಐಕ್ಯತೆಯಾಗಿ
ಮಾಲಿಕ ವಿರೋಧೀ ಐಕ್ಯತೆ
ಬೆಳೆಯುವುದನ್ನೂ ಇದು ತಡೆಯಿ
ತುರ್ಕಿಸ್ಥಾನದಲ್ಲಿ ಖಲೀಫರ ಪದ
ನಡೆದು, ಖಿಲಾಫತ್ ಆಂದೋ
ಚಾಲಕ ಶಕ್ತಿಯೇ ಮಾಯವಾ
ಯಿತು. ಖಿಲಾಫತ್ ಘೋಷಣೆ
ಇಲ್ಲವಾದಾಗ ಮುಸ್ಲಿಮ್ ಜ
ಮಾನ್ಯರು ಕಾಂಗ್ರೆಸ್ಸಿಂದ ಮತ್ತು
ಹೋರಾಟದಿಂದ ದೂರ ಸರಿ
ಎಂದೂ ಅವರು ಇಷ್ಟೊಂದು ಅ
ಸಂಖ್ಯೆಯಲ್ಲಿ ರಾಷ್ಟ್ರೀಯ ಪ್ರಕ್ಷೋ
ಗಳಲ್ಲಿ ಭಾಗವಹಿಸಲಿಲ್ಲ. ಇ
ನಂತರ ಅದರ ಇಸ್ಲಾಮಿ ಆ
ಧಾರ್ಮಿಕ ಭಾವನೆಗಳನ್ನು ಆ
ಪಟ್ಟಭದ್ರ ಹಿತಾಸಕ್ತಿಗಳ ಆ
ಮತ್ತು ಸಾಮ್ರಾಜ್ಯಶಾಹೀ–ವಿರೋ
ಐಕ್ಯಹೋರಾಟದಿಂದ ಅವ
ದೂರವಿಡಲು ದುರುಪಯೋ
ಪಡಿಸಿಕೊಳ್ಳಲಾಯಿತು.

ಾನೂನು ಇತ್ಯಾದಿ ತಾತ್ವಿಕ ಅಂಶಗಳನ್ನು ಕಡೆಗಣಿಸುತ್ತದೆ ್, ಎಂಗೆಲ್ಸ್‌ರ ಬರಹಗಳ ಮೂಲಕವೇ ಲೇಖಕರು ಇದುವರೆಗೆ

ಿಸರವನ್ನು ಪರಿಶೀಲಿಸುತ್ತಾ ಭಾರತದಲ್ಲಿ ಬಂಡವಾಳಶಾಹೀ ದ ಹೆಚ್ಚುತ್ತಿರುವುದಕ್ಕೆ ಕಾರಣವಾದ ಇಲ್ಲಿಯ ಮೂರ್ತ ಹೋರಾಟಕ್ಕೆ ಬೂರ್ಜ್ವಾ ವರ್ಗ ಮುಂದಾಳುತ್ವ ನೀಡಿದ ಳಿಗವಮಾನ್ಯ ಪ್ರಭುತ್ವದೊಂದಿಗಾಗಲಿ, ಅದರ ತತ್ವ ವಿಚಾರ ಂಚಿಕೆಯಲ್ಲಿ ವಿವರಿಸಿದ್ದರು. ಮುಂದೆ ಓದಿ...........

ೀ ಸಿದ್ಧಾಂತದಲ್ಲಿ ತತ್ವ ವಿಚಾರಗಳ ಸ್ಥಾನ

ಬಿ. ಟಿ. ರಣದಿವೆ

ಅಲ್ಪಸಂಖ್ಯಾತ ಧರ್ಮ, ಅಲ್ಪಸಂಖ್ಯಾತ ಪ್ರತ್ಯೇಕ ಭಾವವನ್ನು ಓಲೈಸುವ ಈ ಧೋರಣೆ ಈಗ ರಾಷ್ಟ್ರೀಯ ಹೋರಾಟದ ಮೇಲೆಯೇ ತಿರುಗುಂಬಾಣವಾಯಿತು. 1920ರ ಆ ದಿನಗಳು ಮತ್ತೆಂದೂ ಪುನರಾವರ್ತನೆಗೊಳ್ಳದಂತೆ ಬ್ರಿಟಿಷ್ ಸಾಮ್ರಾಜ್ಯಶಾಹಿಗಳು ಹಾಗೂ ಮುಸ್ಲಿಂ ಭೂಮಾಲಕ ಶಕ್ತಿಗಳೂ ಜಾಗ್ರತೆ ವಹಿಸಿದವು. ಜನಸಾಮಾನ್ಯರಲ್ಲಿ ಧಾರ್ಮಿಕ ಉನ್ಮಾದವನ್ನು ತುಂಬಲಾಯಿತು. ಕೆಲವು ಆಧುನಿಕ ಹಿತಾಸಕ್ತಿಗಳ ರಕ್ಷಣೆಯೇ ಇದರ ಉದ್ದೇಶ. ಆಳುವ ಸಾಮ್ರಾಜ್ಯಶಾಹಿಗಳ ಹಿತಾಸಕ್ತಿಯೂ ಇದರಲ್ಲಿ ಸೇರಿತ್ತು. ಅಲ್ಪಸಂಖ್ಯಾತರು ದೂರ ಸರಿದು ದೇಶದ ವಿಭಜನನೆಗೆ ಕಾರಣವಾದ ಈ ಕಥೆಯ ಹಿನ್ನೆಲೆಯಲ್ಲಿರುವ ಆಧುನಿಕ ವರ್ಗ ಹಿತಾಸಕ್ತಿಗಳನ್ನು ರಜನಿ ಪಾಮೇ ದತ್ ತುಂಬಾ ಚೆನ್ನಾಗಿ ಗುರುತಿಸಿದ್ದಾನೆ—

"ವ್ಯಾಪಾರ, ವಾಣಿಜ್ಯ ಹಾಗೂ ಶಿಕ್ಷಣ ಉತ್ತರದ ಮುಸ್ಲಿಂ ಬಹುಸಂಖ್ಯಾತ ಪ್ರದೇಶಗಳಿಗಿಂತ ಎಷ್ಟೋ ಮೊದಲು ಮುಂಬೈ, ಕಲಕತ್ತೆ ಹಾಗೂ ಮದ್ರಾಸ್‌ನಲ್ಲಿ ಅಂದರೆ ಹಿಂದೂಗಳು ಬಹುಸಂಖ್ಯೆಯಲ್ಲಿರುವ ಪ್ರದೇಶಗಳಲ್ಲಿ ಆರಂಭವಾಯಿತು. ಆದ್ದರಿಂದ ಭಾರತದ ಬೂರ್ಜ್ವಾ ವರ್ಗದ ಉದಯದೊಂದಿಗೇ ಇದ್ದ ಈ ವಿಭಾಗೀಯ ಸ್ಪರ್ಧೆಯ ಸನ್ನಿವೇಶದಲ್ಲಿ ಅದು ಕೋಮು ವೇಷ ತೊಡುವುದು ಸುಲಭವೇ ಆಗಿತ್ತು. ಮುಸ್ಲಿಂ ಮೇಲ್ವರ್ಗದ ಪ್ರಮುಖ ಆಧಾರವಾಗಿದ್ದ ಭೂಮಾಲೀಕರು ವ್ಯಾಪಾರೀ ಹಾಗೂ ಕೈಗಾರಿಕಾ ಬೂರ್ಜ್ವಾ ವರ್ಗದ ಮುನ್ನಡೆಯಿಂದ ತೀವ್ರ ಅಸಂತುಷ್ಟರಾಗಿದ್ದರು. ಆ ಮುನ್ನಡೆಯನ್ನು ಅವರು ಹಿಂದೂ ಬನಿಯಾಗಳ ಮುನ್ನಡೆಯೆಂದು ಪರಿಗಣಿಸಿದ್ದರು."

ತದನಂತರದ ವರ್ಷಗಳ ಅಲ್ಪಸಂಖ್ಯಾತ ಪ್ರತ್ಯೇಕತಾವಾದ ವರ್ಗ ಹಿತಾಸಕ್ತಿಗಳ ತಿಕ್ಕಾಟದ–ಭೂಮಾಲಿಕರು (ಮುಸ್ಲಿಮರು) ಬೂರ್ಜ್ವಾ ವರ್ಗದ ಮುನ್ನಡೆಯನ್ನು ತಡೆಯಲು ಮುಸ್ಲಿಂ ಜನಸಾಮಾನ್ಯರನ್ನು ಮುಂದೊತ್ತುತ್ತಿದ್ದುದರ–ನೇರ ಉತ್ಪತ್ತಿಯೇ ಆಗಿತ್ತು. ಇಲ್ಲಿ ಕಂಡುಬರುವ ಪ್ರಶ್ನೆಯೇನೋ ಹಿಂದೂ ಪ್ರಾಬಲ್ಯವನ್ನು ವಿರೋಧಿಸುವಂತಹದ್ದು. ವರ್ಗ ಘರ್ಷಣೆಗೆ ಮತೀಯ ಭಿನ್ನಾಭಿಪ್ರಾಯದಿಂದ ಉದ್ಭವಿಸುವ ಕೋಮು ಹೋರಾಟದ ವೇಷ ತೊಡಿಸಲಾಯಿತು.

ಕಾಂಗ್ರೆಸ್ ನಾಯಕರ ರಾಷ್ಟ್ರೀಯವಾದದಲ್ಲಿ ಹಿಂದೂ ಧಾರ್ಮಿಕತೆಯ ಬೆರಕೆಯಿತ್ತು ಎಂಬುದರಲ್ಲಿ ಸಂಶಯವಿಲ್ಲ. ಇದು ಸಾಮಾನ್ಯ ಮುಸಲ್ಮಾನನನ್ನು ಮತ್ತಷ್ಟು ಕಷ್ಟದಲ್ಲಿ ಸಿಲುಕಿಸಿತು.

ಜಾತಿ ಪ್ರಜ್ಞೆ–– ಇನ್ನೊಂದು ದುಷ್ಫಲ

ಜಾತಿ ಪ್ರಜ್ಞೆ ಬದುಕುಳಿಯಲು ಕೂಡಾ ಆದೆ: ಕಾರಣ— ಅದೇ ಕೃಷಿ ಕ್ರಾಂತಿಯನ್ನು ಮುಂದಕ್ಕೆ ಒಯ್ಯುವಲ್ಲಿ ವಿಫಲತೆ, ಮುಂದಾಳತ್ವ ವಹಿಸಿದ ಬೂರ್ಜ್ವಾ ವರ್ಗ ಭೂಮಾಲಿಕ ಹಿತಾಸಕ್ತಿಗಳೊಂದಿಗೆ ಸಾಧಿಸಿದ ಸಖ್ಯ, ತತ್ಪರಿಣಾಮವಾಗಿ ಪುನರುತ್ಥಾನವಾದಕ್ಕೆ, ಹಿಂದೂ ಸಮಾಜ ಸುಧಾರಣೆಗೆ ಪೋಷಣೆ, ಬೂರ್ಜ್ವಾ ಬುದ್ಧಿಜೀವಿಗಳೆಲ್ಲಾ ಹೆಚ್ಚಾಗಿ ಮೇಲ್ಜಾತಿಗಳಿಂದಲೆ ಬಂದವರಾದ್ದರಿಂದ ಖಂಡಿತವಾಗಿಯೂ ಜಾತಿಪ್ರಾಬಲ್ಯದ ವಿರುದ್ಧ ಹೋರಾಟದ ಪ್ರಶ್ನೆ ಕೈಗೆತ್ತಿಕೊಳ್ಳುವುದು ಅವರಿಗೆ ಬೇಡವಾಗಿತ್ತು. ಅವರದನ್ನು 'ರಾಜಕೀಯದೊಂದಿಗೆ ಧರ್ಮವನ್ನು ಬೆರೆಸುವುದು' ಎಂದೇ ಹೆಸರಿಸಿದರು. ಆದ್ದರಿಂದಲೇ ಪ್ರಾರಂಭದ ಜಾತಿ–ವಿರೋಧೀ ಚಳುವಳಿಗಳು —ದಮನಕ್ಕೊಳಗಾದ ಜಾತಿಗಳ ಪ್ರಾಮಾಣಿಕ ಪ್ರತಿಭಟನೆಯ ಚಳುವಳಿಗಳು–– ಕಾಂಗ್ರೆಸ್ ಪರಿಧಿಯ ಹೊರಗೇನೇ ನಡೆದವು. ಈ ಚಳುವಳಿಗಳು, ಕೂಡಾ ತಮ್ಮ ಜಾತಿ ವಿರೋಧಿ ಹೋರಾಟವನ್ನು ಕೃಷಿ ಸಂಬಂಧಗಳನ್ನು ಬದಲಿಸುವ ಹೋರಾಟಗಳೊಂದಿಗೆ ಜೋಡಿಸಲಿಲ್ಲ. ಸಾಮ್ರಾಜ್ಯಶಾಹಿ–ವಿರೋಧಿ ಹೋರಾಟಗಳಿಂದಲೂ ಇವು ದೂರ ನಿಂತವು. ಜಾತಿ ವ್ಯವಸ್ಥೆಯೊಂದಿಗೆ ಸಂಧಾನದ ತತ್ವವನ್ನು, ಅದರ ಸಮರ್ಥನೆಯನ್ನು ಪ್ರತಿನಿಧಿಸಿದವರು ಬೇರಾರೂ ಅಲ್ಲ, ಸ್ವತಃ ಗಾಂಧಿಯವರೇ. ಇದು ವಿಚಿತ್ರವಾಗಿ ಕಾಣಬಹುದು. ಯಾಕೆಂದರೆ ಮಹಾತ್ಮರವರು ಪ್ರಥಮ ಅಸಹಕಾರ ಆಂದೋಲನದಲ್ಲಿ ಅಸ್ಪೃಶ್ಯತೆಯ ವಿರುದ್ಧ ಧರ್ಮಯುದ್ಧವನ್ನೇ ಸಾರಿದವರು. ಅದರ ಮೊದಲಿನ ವರ್ಷಗಳಿಗಿಂತ ಮುಂದುವರಿದ ಹೆಜ್ಜೆಯಾಗಿತ್ತದು. ಬ್ರಿಟಿಷರ ವಿರುದ್ಧ ಒಂದು ಸಾರ್ವತ್ರಿಕ ಪ್ರಕ್ಷೋಭೆಗೆ ಇದರ ಅಗತ್ಯವೂ ಇತ್ತು. ಈ ಆವೇಶಭರಿತ ಪ್ರತಿಭಟನೆಯನ್ನು ಕೇವಲ ಹಿಂದೂಗಳ ಸಮಾಜ-ಸುಧಾರಣೆಯ ಮಟ್ಟಕ್ಕೆ ಇಳಿಸಿ ಅದನ್ನು ಭೂಸಂಬಂಧಗಳ ವಿರುದ್ಧ ಹೋರಾಟದಿಂದ ಪ್ರತ್ಯೇಕಿಸಲಾಯಿತು. ಇಷ್ಟೇ ಅಲ್ಲ, ಅದರೊಡನೆ ವರ್ಣಾಶ್ರಮ ವ್ಯವಸ್ಥೆಯ ಬಹಿರಂಗ ಸಮರ್ಥನೆಯೂ ನಡೆಯಿತು—

"ನಾವು ಅಸ್ಪೃಶ್ಯತೆಯನ್ನು ನಿರ್ನಾಮಗೊಳಿಸದಿದ್ದರೆ ನಾವೇ ಪ್ರಪಂಚದಿಂದ ನಿರ್ನಾಮ ಹೊಂದುತ್ತೇವೆ....ನಾಲ್ಕು ವರ್ಣಗಳು ಮೂಲಭೂತ, ಸ್ವಾಭಾವಿಕ, ಆವಶ್ಯಕ ; ಆದರೆ ಅಸಂಖ್ಯ ಜಾತಿಗಳು ಮಾತ್ರ ದುರ್ಮಾಂಸಗಳು.... ....ವರ್ಣಗಳು ಪ್ರಕೃತಿಯ ಶಕ್ತಿ ಸಂರಕ್ಷಣೆಯ ನಿಯಮವನ್ನು ಆರ್ಥಿಕತೆಯನ್ನು ಪರಿಪಾಲಿಸುತ್ತವೆ. ಅದು ಸ್ವಯಂ ಸಂಸ್ಕೃತಿಯ ವಿವಿಧ ಪದ್ಧತಿಗಳ ವರ್ಗೀಕರಣ. ಅದು ಸಾಮಾಜಿಕ ಸ್ಥಿರತೆ ಮತ್ತು ಪ್ರಗತಿಯ ನಡುವೆ ಸಾಧಿಸಿದ ಅತ್ಯುತ್ತಮ ಸಮತೋಲನ. ಒಂದು ನಿರ್ದಿಷ್ಟ ಜೀವನ ಶೈಲಿಯ ಗುಂಪನ್ನು ಒಳಗೊಳ್ಳಲು ಅದು ಪ್ರಯತ್ನಿಸುತ್ತದೆ. ಒಂದು ನಿರ್ದಿಷ್ಟ ಕುಟುಂಬ ಒಂದು ನಿರ್ದಿಷ್ಟ ವಿಧಾನಕ್ಕೆ ಸೇರುತ್ತದೋ ಇಲ್ಲವೋ ಎಂಬ ನಿರ್ಣಯವನ್ನು ಅದು ಕೆಲವು ಬುದ್ಧಿಜೀವಿಗಳ ಮರ್ಜಿಗೆ ಅಥವಾ ಆಸಕ್ತ ತೀರ್ಪುಗಳಿಗೆ ಬಿಡುವುದಿಲ್ಲ, ಅಷ್ಟೆ. ಅದು ವಂಶಪರಂಪರೆಯ ನೀತಿಯನ್ನು ನಂಬುತ್ತದೆ. ಅದು ಕೇವಲ ಒಂದು ಸಾಂಸ್ಕೃತಿಕ ವ್ಯವಸ್ಥೆಯಾದ್ದರಿಂದ ಒಬ್ಬ ವ್ಯಕ್ತಿ ಅಥವಾ ಒಂದು ಕುಟುಂಬ ತಮ್ಮ ಜೀವನ ವಿಧಾನವನ್ನು ಬದಲಿಸಿ ಉತ್ತಮಗೊಳಿಸಬೇಕೆಂದು ಕೈಗೊಂಡ ನಿರ್ಧಾರಕ್ಕೆ ವ್ಯತಿರಿಕ್ತವಾಗಿ ಅದೇ ಗುಂಪಿನಲ್ಲಿ ಉಳಿಯಬೇಕಾಗಿಬಂದರೆ ಅನ್ಯಾಯ ಮಾಡಿದಂತೆ ಎಂದು ಅದು ಬಗೆಯುವುದಿಲ್ಲ. ಇದಕ್ಕಿಂತ ಹೆಚ್ಚು ಸಮರಸಪೂರ್ಣ ಹೊಂದಾಣಿಕೆಯನ್ನು ಊಹಿಸಿಕೊಳ್ಳುವುದೂ ಕಷ್ಟ. ಅದು ವಿವಿಧ ದೃಷ್ಟಿಕೋನಗಳನ್ನು ಮತ್ತು ಅದಕ್ಕನುಗುಣವಾದ ಜೀವನ ವಿಧಾನಗಳನ್ನು ಮಾನ್ಯ ಮಾಡುತ್ತದಷ್ಟೆ. [Caste Challenge in Indiaದಲ್ಲಿ ಜಗಜೀವನರಾಂರವರಿಂದ ಉದ್ಧೃತ[

ಜವಹರಲಾಲ್ ನೆಹರೂ ಇದಕ್ಕಿಂತ ಮುಂದುವರಿದ ಧರ್ಮಾತೀತ ದೃಷ್ಟಿಕೋನ ಹೊಂದಿದ್ದರೂ, ಕಾಂಗ್ರೆಸ್ಸಿನ ನಾಯಕರು ಹಾಗೂ ಅನುಯಾಯಿಗಳು ಈ ಗಾಂಧೀ ದೃಷ್ಟಿಕೋನದ ಪ್ರಭಾವಕ್ಕೊಳಗಾಗಿದ್ದರು ಮತ್ತು ಇದು ಸಾಮ್ರಾಜ್ಯಶಾಹಿ-ವಿರೋಧೀ ಹೋರಾಟದ ನಾಯಕತ್ವದಲ್ಲಿದ್ದ ಬೂರ್ಜ್ವಾಗಳ ವರ್ಗ ಅವಶ್ಯಕತೆಯನ್ನು ಕೂಡಾ ಸರಿಯಾಗಿ ಪ್ರತಿನಿಧಿಸುತ್ತಿತ್ತು. ರಾಷ್ಟ್ರೀಯ ನಾಯಕರು ದೇಶವೇ ಎಲ್ಲಕ್ಕೂ ಮೊದಲು, ಎಲ್ಲಕ್ಕೂ ಕೊನೆ ಎಂದು ದನಿ ಎತ್ತರಿಸಿ ಸಾರಿದರೂ ಕೂಡಾ ಅವರ ಕೃತಿಗಳು ಈ ಗಾಂಧಿವಾದಿ ತಿಳುವಳಿಕೆಯನ್ನೇ— ಅಂದರೆ ಜಾತಿಯ ಆಚರಣೆಯನ್ನೇ—ಆಧರಿಸಿದ್ದವು.

ಕಾನೂನಿನೆದುರು ಎಲ್ಲಾ ನಾಗರಿಕರೂ ಸಮಾನರು ಎಂಬ ನೀತಿಯನ್ನು ಬೂರ್ಜ್ವಾ ನಾಯಕರು ಸಂವಿಧಾನದಲ್ಲಿ ಸೇರಿಸಿದರು. ಆದರೆ ಇದು ಕೇವಲ ಔಪಚಾರಿಕ ಘೋಷಣೆಯಾಗಿತ್ತು. ವಾಸ್ತವ ಜೀವನದಲ್ಲಿ ವಿಭಿನ್ನ ಜಾತಿಗಳ ನಡುವೆ ಯಾವ ಸಮಾನತೆಯೂ ಇರಲಿಲ್ಲ.

ಕಮ್ಯುನಿಸ್ಟರ ನಿಲುವು

ಅಸ್ಪೃಶ್ಯತೆ ಹಾಗೂ ಜಾತಿ ವ್ಯವಸ್ಥೆಯ ವಿರುದ್ಧ ಹೋರಾಟಕ್ಕೂ ಕೃಷಿ ಕ್ರಾಂತಿ ಮತ್ತು ಸಾಮ್ರಾಜ್ಯಶಾಹೀ ಅಧಿಪತ್ಯದ ಅಂತ್ಯಕ್ಕೂ ಸಂಬಂಧ ಕಲ್ಪಿಸಿದ್ದು ಕೇವಲ ಕಮ್ಯುನಿಸ್ಟ್ ಪಕ್ಷ ಮಾತ್ರ. ಕೃಷಿ ಕ್ರಾಂತಿ ಮತ್ತು ವರ್ಗ ಹೋರಾಟ ಹಿಂದೂ–ಮುಸ್ಲಿಂ ಪ್ರತ್ಯೇಕತೆಯನ್ನು ಕಾರ್ಯತಃ ಮೀರಿ ನಿಲ್ಲುವ ಪ್ರಮುಖ ಅಂಶ ಎಂದು ಕಂಡುಕೊಂಡದ್ದು ಕಮ್ಯುನಿಸ್ಟ್ ಪಕ್ಷ ಮಾತ್ರ. 1930ರ ಭಾರತ ಕಮ್ಯುನಿಸ್ಟ್ ಪಕ್ಷದ ಕ್ರಿಯಾವೇದಿಕೆ [Platform of Action] ಹೀಗೆ ಹೇಳಿದೆ—

"ನಮ್ಮ ದೇಶದಲ್ಲಿ ಬ್ರಿಟಿಷ್ ಆಳ್ವಿಕೆಯ ಪರಿಣಾಮವಾಗಿ ಈಗಲೂ ಎಲ್ಲಾ ಹಕ್ಕುಗಳಿಂದ ವಂಚಿತರಾದ ಲಕ್ಷಗಟ್ಟಲೆ ಗುಲಾಮರು, ಸಮಾಜದಿಂದ ಬಹಿಷ್ಕೃತರಾದ ಕೋಟಿಗಟ್ಟಲೆ ದುಡಿಮೆಗಾರರಿದ್ದಾರೆ. ಬ್ರಿಟಿಷ್ ಆಳ್ವಿಕೆ, ಭೂಮಾಲೀಕ ಪದ್ಧತಿ, ಪ್ರತಿಕ್ರಿಯಾವಾದಿ ಜಾತಿ ಪದ್ಧತಿ, ಧಾರ್ಮಿಕ ವಂಚನೆ ಹಾಗೂ ಗತಕಾಲದ ಆ ಎಲ್ಲಾ ಗುಲಾಮ ಹಾಗೂ ಜೀತದ ಪರಂಪರೆ ಭಾರತೀಯ ಜನತೆಯುಸಿರುಗಟ್ಟಿಸಿವೆ. ಅವರ ವಿಮೋಚನೆಗೆ ಅಡ್ಡಿಯಾಗಿವೆ. ಇವೆಲ್ಲವುಗಳ ಫಲಿತಾಂಶವೇನೆಂದರೆ ಇಪ್ಪತ್ತನೆಯ ಶತಮಾನದಲ್ಲಿ ಕೂಡಾ ಸಹ ಮಾನವರೊಂದಿಗೆ ಬೆರೆಯುವ ಹಕ್ಕಿಲ್ಲದ, ಸಾರ್ವಜನಿಕ ಬಾವಿಗಳಿಂದ ನೀರು ಕುಡಿಯುವ, ಸಾರ್ವಜನಿಕ ಶಾಲೆಗಳಲ್ಲಿ ಓದುವ ಹಕ್ಕಿಲ್ಲದ [ಸಮಾಜ ಬಾಹಿರ ಶ್ರಮಜೀವಿಗಳು ಇನ್ನೂ ಭಾರತದಲ್ಲಿದ್ದಾರೆ.

ಭಾರತದ ಜನತೆಯ ಮೇಲಿನ ಈ ನಾಚಿಕೆಗೇಡಿನ ಕಳಂಕವನ್ನು ತೊಡೆದು ಹಾಕುವ ಬದಲು ಗಾಂಧಿ ಹಾಗೂ ಇತರ ಕಾಂಗ್ರೆಸ್ ನಾಯಕರು ಈ ಸಮಾಜದಿಂದ ಬಹಿಷ್ಕೃತರಾಗಿರುವ ದುಡಿಮೆಗಾರರ ಅಸ್ತಿತ್ವಕ್ಕೆ ಮೂಲ ಕಾರಣವಾದ ಮತ್ತು ಅದಕ್ಕೆ ಸಮರ್ಥನೆ ಒದಗಿಸುವ ಜಾತಿ ಪದ್ಧತಿಯನ್ನು ಕಾಯ್ದುಕೊಳ್ಳಬೇಕೆಂದು ಕರೆ ನೀಡುತ್ತಾರೆ.

ಜಾತಿಪದ್ಧತಿಯನ್ನು ಅದರ ಸುಧಾರಿತ ಗಾಂಧೀವಾದಿ ಆವೃತ್ತಿಯೊಂದಿಗೆ ನಿಷ್ಕರುಣೆಯಿಂದ ತೊಡೆದು ಹಾಕಿದಾಗ ಮಾತ್ರ, ಕೃಷಿ ಕ್ರಾಂತಿಯಿಂದ ಮಾತ್ರ, ಬ್ರಿಟಿಷ್ ಆಳ್ವಿಕೆಯನ್ನು ಕಿತ್ತೆಸೆದಾಗ ಮಾತ್ರ ಸಮಾಜಬಾಹಿರರಾಗಿರುವ ಶ್ರಮಜೀವಿಗಳ ಹಾಗೂ ಗುಲಾಮರ ಸಾಮಾಜಿಕ, ಆರ್ಥಿಕ ಹಾಗೂ ಕಾನೂನುರೀತ್ಯಾ ವಿಮೋಚನೆ ಸಾಧ್ಯ. ಬ್ರಿಟಿಷ್ ಆಳ್ವಿಕೆ ಹಾಗೂ ಭೂಮಾಲೀಕತ್ವದ ವಿರುದ್ಧ ಎಲ್ಲಾ ಕಾರ್ಮಿಕರ ಕ್ರಾಂತಿಕಾರೀ ಐಕ್ಯರಂಗವನ್ನು ಸೇರಬೇಕೆಂದು ಈ ಎಲ್ಲಾ ಸಮಾಜಬಾಹಿರ ದುಡಿಮೆಗಾರರಿಗೆ ಭಾರತ ಕಮ್ಯುನಿಸ್ಟ್ ಪಕ್ಷ ಕರೆ ನೀಡುತ್ತದೆ.

ನಮ್ಮ ದೇಶದ ದುಡಿಮೆಗಾರರಲ್ಲಿ ಒಡಕುಂಟು ಮಾಡಿ, ಒಬ್ಬರು ಇನ್ನೊಬ್ಬರೊಡನೆ ಪರಸ್ಪರ ಹೊಡೆದಾಡುವಂತೆ ಪ್ರಯತ್ನಿಸುವ ಬ್ರಿಟಿಷರ ಹಾಗೂ ಅವರ ಪ್ರತಿಕ್ರಿಯಾವಾದಿ ಏಜೆಂಟರ ಕುಟಿಲೋಪಾಯಗಳಿಗೆ ಅವಕಾಶ ಕೊಡಬಾರದು ಎಂದು ಭಾರತ ಕಮ್ಯುನಿಸ್ಟ್ ಪಕ್ಷ ಸಮಾಜ ಬಾಹಿರ ಶ್ರಮಜೀವಿಗಳಿಗೆ ಕರೆ ನೀಡುತ್ತದೆ.

ಭಾರತ ಕಮ್ಯುನಿಸ್ಟ್ ಪಕ್ಷ ಗುಲಾಮ ಪದ್ಧತಿಯನ್ನು, ಜಾತಿ ಪದ್ಧತಿ ಮತ್ತು ಜಾತಿಯ ಅಸಮಾನತೆಯನ್ನು ಅದರೆಲ್ಲಾ ರೂಪಗಳಲ್ಲಿ [ಸಾಮಾಜಿಕ, ಸಾಂಸ್ಕೃತಿಕ ಇತ್ಯಾದಿ] ಸಂಪೂರ್ಣವಾಗಿ ತೊಡೆದುಹಾಕಲು ಹೋರಾಡುತ್ತದೆ; ದೇಶದ ಎಲ್ಲಾ ಸಮಾಜಬಾಹಿರ ದುಡಿಮೆಗಾರರ ಮತ್ತು ಶ್ರಮಜೀವಿಗಳ ಸಂಪೂರ್ಣ ಹಾಗೂ ಅಖಂಡ ಸಮಾನತೆಗಾಗಿ ಹೋರಾಡುತ್ತದೆ."

[ಮುಂದುವರಿಯುವುದು]

ಕರ್ನಾಟಕ ಪ್ರಾಂತ ರೈತಸಂಘದಿಂದ ಮುಖ್ಯಮಂತ್ರಿಯವರಿಗೆ ಮನವಿ

ಕರ್ನಾಟಕದ ಪ್ರಾಂತ ರೈತ ಸಂಘದ ಅಧ್ಯಕ್ಷರಾದ ಕಾ| ಪಿ. ರಾಮಚಂದ್ರ ರಾವ್ ಮತ್ತು ಪ್ರಧಾನ ಕಾರ್ಯದರ್ಶಿಗಳಾದ ಕಾ. ವಿ. ಎನ್. ಹಳಕಟ್ಟಿ ಅವರು ಮಾರ್ಚಿ 3ರಂದು ರಾಜ್ಯದ ರೈತ–ರೈತ ಕೂಲಿಕಾರರ ಸಮಸ್ಯೆಗಳು ಮತ್ತು ಅವುಗಳಿಗೆ ತುರ್ತು ಪರಿಹಾರ ಕುರಿತು ರಾಜ್ಯದ ಮುಖ್ಯಮಂತ್ರಿ ಶ್ರೀ ರಾಮಕೃಷ್ಣ ಹೆಗ್ಗಡೆ ಅವರಿಗೆ ಸಲ್ಲಿಸಿದ ಮನವಿಯಲ್ಲಿ ಒಳಗೊಂಡಿರುವ ಕೆಲವು ಮುಖ್ಯ ಬೇಡಿಕೆಗಳು ಈ ಕೆಳಗಿನಂತಿವೆ :

ಮುಖ್ಯ ಬೇಡಿಕೆಗಳು

1. ಕೃಷಿ ಯೋಗ್ಯ ಸರಕಾರಿ ಬಂಜರು ಮತ್ತು ಅರಣ್ಯ ಭೂಮಿಯನ್ನು ಭೂಹೀನರಿಗೆ ಹಂಚಿಕೆ ಮಾಡಬೇಕು. ಈಗಾಗಲೇ ಅಂಥ ಭೂಮಿಯಲ್ಲಿ ತಮ್ಮ ಸರಕಾರ ಆಡಳಿತಕ್ಕೆ ಬರುವುದಕ್ಕೆ ಮುಂಚೆ ಕೃಷಿಗೆ ತೊಡಗಿರುವ ಲಕ್ಷಾಂತರ ಜನ ಕೃಷಿ ಕೂಲಿಕಾರ ಬಡ ರೈತರಿಗೆ ಉಚಿತವಾಗಿ ಹಕ್ಕು ಪತ್ರ ನೀಡಬೇಕು.

2. ಹೆಚ್ಚುವರಿ ಭೂಮಿ ಸ್ವಾಧೀನ ಪಡೆದುಕೊಳ್ಳುವ ಹಂತದಲ್ಲೂ ಮತ್ತು ಹಂಚಿರುವ ಸಂದರ್ಭದಲ್ಲೂ ಕೋರ್ಟ್‌ಸ್ಟೇ ತಂದು ಇತ್ಯರ್ಥವಾಗದೆ ನಿಂತಿರುವ ಎಲ್ಲಾ ಕೇಸುಗಳು ಕೂಡಲೇ ಬಗೆಹರಿಯಲೇಬೇಕು. ತೀವ್ರಗತಿಯಿಂದ ಸ್ಟೇ ಖಾಲಿ ಮಾಡಿಸಿ ಭೂಹೀನರಿಗೆ ಉಚಿತವಾಗಿ ಹಂಚಿಕೆಯಾಗಬೇಕು.

3. ಭೂ ನ್ಯಾಯ ಮಂಡಳಿ, ಕಾಡಾಸಮಿತಿ ಮತ್ತು ಭೂವಿತರಣಾ ಸಮಿತಿಗಳಲ್ಲಿ ಎಲ್ಲ ರಾಜಕೀಯ ಪಕ್ಷಗಳ ಮತ್ತು ರೈತ ಸಂಘಟನೆಗಳ ಪ್ರತಿನಿಧಿಗಳಿಗೆ ಪ್ರಾತಿನಿಧ್ಯ ಕೊಡಬೇಕು.

4. ಭೂ ನ್ಯಾಯ ಮಂಡಳಿಗಳಲ್ಲಾದ ಅನ್ಯಾಯವನ್ನು ಪುನರ್ ವಿಮರ್ಶೆ ಮಾಡಿ ಅನ್ಯಾಯವನ್ನು ಪತ್ತೆಹಚ್ಚಲು ಎಲ್ಲ ರಾಜಕೀಯ ಪಕ್ಷಗಳ ಪ್ರತಿನಿಧಿಗಳನ್ನೊಳಗೊಂಡ ಸಮಿತಿಯನ್ನು ನೇಮಿಸಬೇಕು.

5. ಗೇಣಿದಾರರಾಗಿದ್ದು ಅನಿವಾರ್ಯ ಕಾರಣಗಳಿಂದಾಗಿ ಹಿಂದೆ ನಮೂದಿಸಿದ್ದ ನಿಶ್ಚಿತ ಅವಧಿಯಲ್ಲಿ ಅರ್ಜಿ ಹಾಕಿಕೊಳ್ಳಲು ಸಾಧ್ಯವಾಗದಿದ್ದವರಿಗೆ ಅನುಕೂಲವಾಗಲು ಅಂಥ ಭೂಮಿಗೆ ಅವರು ಹೊಸದಾಗಿ ಅರ್ಜಿ ಹಾಕಲು ಅವಕಾಶ ನೀಡಬೇಕು.

6. ನಗರದ ಸುತ್ತಮುತ್ತಲಿರುವ ರೈತರ ಕೃಷಿ ಭೂಮಿಯನ್ನು ನಗರ ಭೂಮಿತಿ ಕಾನೂನಿನನ್ವಯ ಸ್ವಾಧೀನಪಡಿಸಿಕೊಳ್ಳುವಲ್ಲಿ ವಿನಾಯಿತಿ ನೀಡಬೇಕು. ಅಗತ್ಯ ಬಿದ್ದಲ್ಲಿ ನಗರ ಪ್ರದೇಶದಲ್ಲಿ ಮಾರಾಟವಾಗುವ ಚಾಲ್ತಿ ಇರುವ ಬೆಲೆಗಳಷ್ಟು ಹೆಚ್ಚಿನ ಪರಿಹಾರವನ್ನು ನೀಡಬೇಕು.

7. ಕೃಷಿ ಭೂಮಿಯನ್ನು ಕನ್‌ವರ್‌ಷನ್ ಮಾಡುವ ಕಾನೂನು ರದ್ದುಪಡಿಸಬೇಕು.

8. ಐದು ಎಕರೆಗಳಿಗಿಂತಲೂ ಚಿಕ್ಕದಿರುವ ಭೂಮಿಯನ್ನು ಮಾರಲು ನಿಷೇಧಿಸಿರುವ ಫ್ರಗ್ಮೆಂಟೇಷನ್ ಕಾನೂನು ರದ್ದಾಗಿ ಬಡ ರೈತರು ಅಂತಹ ಭೂಮಿಯನ್ನು ಮಾರಲು ಅವಕಾಶ ನೀಡಬೇಕು.

9. ಕೃಷಿ ಕೂಲಿಕಾರರಿಗೆ ದಿನಗೂಲಿ ಒಣ ಬೇಸಾಯದಲ್ಲಿ ದಿನಕ್ಕೆ ಕನಿಷ್ಟ ರೂ. 10 ಮತ್ತು ನೀರಾವರಿ ಬೇಸಾಯದಲ್ಲಿ ದಿನಕ್ಕೆ ಕನಿಷ್ಟ ರೂ. 12ಗಳನ್ನು ಕನಿಷ್ಟ ಕೂಲಿ ಕಾನೂನಿನನ್ವಯ ನಿಗದಿಪಡಿಸಿ ಅದನ್ನು ಜಾರಿಗೆ ತರಬೇಕು.

10. ಕೃಷಿ ಕೂಲಿಕಾರ, ಬಡ ರೈತರ ವಸತಿಹೀನರಾಗಿದ್ದವರಿಗೆ ಮನೆ ಕಟ್ಟಲು ಉಚಿತ ಸ್ಥಳಾವಕಾಶ ಪ್ರತಿಯೊಬ್ಬರಿಗೆ ಕನಿಷ್ಟ 10 ಸೇಂಟಿನಷ್ಟು ನೀಡಿ ಅಂಥವರಿಗೆ ಖಾತೆ ಮಾಡಿ ಸರಕಾರವೇ ಮನೆ ಕಟ್ಟಿಸಿ ಕೊಡಬೇಕು.

11. ವಸತಿಹೀನರಿಗೆ ಹಂಚಲಾಗಿರುವ ಜನತಾ ನಿವೇಶನಗಳಿಗೆ ಮನೆಗಂದಾಯ ಆಕರಣೆ ಮಾಡುವುದು ನಿಲ್ಲಿಸಬೇಕು, ಜನತಾ ಮನೆ ಸಾಲ ಸಂಪೂರ್ಣ ರದ್ದಾಗಬೇಕು.

12. ಕೃಷಿ ಕೂಲಿಕಾರರ ಮತ್ತು ಬಡ ರೈತರ ಸರಕಾರಿ ; ಸಹಕಾರಿ ಸಾಲವನ್ನೆಲ್ಲವನ್ನೂ ಸಂಪೂರ್ಣ ರದ್ದು ಮಾಡಿ ಅವರಿಗೆ ಸುಲಭ ದರದಲ್ಲಿ (ಬಡ್ಡಿ ಇಲ್ಲದೆ) ಸಾಲ ಸೌಲಭ್ಯ ನೀಡಬೇಕು. ಅಂಥ ಬಡ್ಡಿಯನ್ನು ಸರಕಾರವೇ ಸಬ್ಸಿಡಿ ನೀಡಿ ಈ ಕ್ರಮವನ್ನು ಅನುಸರಿಸಬೇಕು.

13. ಕೃಷಿ ಕೂಲಿಕಾರರಿಗೆ ವರ್ಷವಿಡೀ ಉದ್ಯೋಗ ನೀಡುವಂತಾಗಲು ಮುಖ್ಯವಾಗಿ ಒಣ ಬೇಸಾಯ ಮತ್ತು ಬರಗಾಲಪೀಡಿತ ಪ್ರದೇಶಗಳಲ್ಲಿ ಎನ್.ಆರ್.ಇ.ಪಿ. ಮತ್ತು ಡಿ.ಆರ್.ಡಿ ಎಸ್. ಸ್ಕೀಮುಗಳಿಗೆ ಹೆಚ್ಚಿನ ಧನ ಸಹಾಯ ನೀಡಬೇಕು.

14. 60 ವರ್ಷಕ್ಕೂ ಮಿಕ್ಕಿದ ಕೃಷಿ ಕೂಲಿಕಾರರಿಗೆ ರೂ. 100ನ್ನು ಮಾಸಾಶನ ನೀಡಬೇಕು.

15. ಕೃಷಿ ಕೂಲಿಕಾರರಿಗೆ ಕನಿಷ್ಟ ಕೂಲಿ, ಕೆಲಸದ ಭದ್ರತೆ, ಕೆಲಸದ ಪರಿಸ್ಥಿತಿಗಳಲ್ಲಿ ಸುಧಾರಣೆ ಗ್ಯಾರಂಟಿ ಮಾಡಿ ಕೊಡುವ ಕಾನೂನು ಜಾರಿಗೆ ಬರಬೇಕು.

16. ಕೃಷಿ ಉತ್ಪನ್ನಗಳಿಗೆ ನ್ಯಾಯಯುತ ಲಾಭದಾಯಕ ಬೆಲೆಗಳು, ಕೃಷಿ ಉತ್ಪನ್ನ ಖರ್ಚು ಮತ್ತು ರೈತರ ಜೀವನ ನಿರ್ವಹಣೆಗಾಗಿ ಬೇಕಾಗುವ ನಿವ್ವಳ ಲಾಭಗಳನ್ನೊಳಗೊಂಡು ವೈಜ್ಞಾನಿಕ ರೀತಿಯಲ್ಲಿ ನಿಶ್ಚಿತಗೊಳಿಸಿದ ಬೆಲೆಗಳು ವರ್ಷ ವರ್ಷವೂ ಸುಗ್ಗಿಯ ಮೊದಲು ಜಾರಿಗೆಬರಬೇಕು. ವರ್ಷವಿಡೀ ಒಂದೇ ನಿರ್ದಿಷ್ಟವಾಗಿ ನಿಗದಿಪಡಿಸಿದ ಬೆಲೆಗಳಲ್ಲಿ ಖರೀದಿಸುವಂತಾಗಲು ಖಾಸಗಿ ಗುತ್ತೆದಾರಿ ವ್ಯಾಪಾರಸ್ಥರ ಶೋಷಣೆಯಿಂದ ರೈತರನ್ನು ಮುಕ್ತಮಾಡಲು ಕೃಷಿ ಉತ್ಪನ್ನಗಳ ಸಗಟು ವ್ಯಾಪಾರವನ್ನು ಸರಕಾರವೇ ವಹಿಸಿಕೊಳ್ಳಬೇಕು,

17. ಭತ್ತ ಕ್ವಿಂಟಾಲಿಗೆ ರೂ. 175, ಗೋಧಿ ಕ್ವಿಂಟಾಲಿಗೆ ರೂ. 250, ಜೋಳ ಕ್ವಿಂಟಾಲಿಗೆ ರೂ. 200, ಕಬ್ಬು ಕ್ವಿಂಟಾಲಿಗೆ ರೂ. 25ರಿಂದ 30, ರಾಗಿ ಕ್ವಿಂಟಾಲಿಗೆ ರೂ. 200, ಹತ್ತಿ ಕ್ವಿಂಟಾಲಿಗೆ ರೂ. 550ರಿಂದ 1000ರವರೆಗೆ, ಕೋಕೋ ಕೆ.ಜಿ.ಗೆ ರೂ. 12, ರೇಷ್ಮೆ ಕೆ.ಜಿ.ಗೆ ರೂ. 50ರಿಂದ 60, ಮೆಣಸಿನಕಾಯಿ ಕ್ವಿಂಟಾಲಿಗೆ ರೂ. 1000. ತೊಗರಿಬೇಳೆ ಕ್ವಿಂಟಾಲಿಗೆ ರೂ. 500ರಿಂದ 600, ತಂಬಾಕು ಕೆ.ಜಿ.ಗೆ ರೂ. 10ರಿಂದ 15ಗಳಂತೆ ನ್ಯಾಯಯುತ ಬೆಲೆಗಳನ್ನು ನಿಗದಿಪಡಿಸಬೇಕು.

18. ಈ ವರ್ಷವೂ ಬರಗಾಲಕ್ಕೆ ತುತ್ತಾಗಿರುವ ಎಲ್ಲ ಪ್ರದೇಶಗಳಲ್ಲಿ ತುರ್ತು ಬರಗಾಲ ಪರಿಹಾರ ನೀಡಲು ತುರ್ತು ಕ್ರಮಗಳನ್ನು ಅನುಸರಿಸಬೇಕಲ್ಲದೆ ಬರಗಾಲಪೀಡಿತ ಪ್ರದೇಶಗಳಿಗೆ ಶಾಶ್ವತ ಪರಿಹಾರ ನೀಡುವಂತಾಗಲು ಪ್ರಾಶಸ್ತ್ಯ ನೀಡಿ ಅಲ್ಲಿ ಯೋಚಿಸಿ ಅರ್ಥಕ್ಕೆ ಹಣ ಸಹಾಯವಿಲ್ಲದೆ ನಿಂತಿರುವ ಎಲ್ಲಾ ನೀರಾವರಿ ಯೋಜನೆಗಳನ್ನು ತುರ್ತಾಗಿ ಕಾರ್ಯರೂಪಕ್ಕಿಳಿಸಿ, ನಿಶ್ಚಿತ ಅವಧಿಯೊಳಗಾಗಿ

(8ನೇ ಪುಟ ನೋಡಿ)

ಧಾರವಾಡದಲ್ಲಿ

ಕಾರ್ಲ್ ಮಾರ್ಕ್ಸ್ ಕುರಿತು ವಿಚಾರ ಸಂಕಿರಣ

ಧಾರವಾಡದ ಕರ್ನಾಟಕ ವಿಶ್ವವಿದ್ಯಾಲಯದ ಗಾಂಧಿ ಭವನದಲ್ಲಿ ಮಾರ್ಚ್ 26 ಹಾಗೂ 27ರಂದು ಮಾರ್ಕ್ಸ್ ಶತಾಬ್ದಿ ಸಮಿತಿಯ ಪರವಾಗಿ "ಮಾರ್ಕ್ಸ್ ಹಾಗೂ ಮಾರ್ಕ್ಸ್‌ವಾದ ಇಂದು" ವಿಷಯದ ಮೇಲೆ ಎರಡು ದಿನಗಳ ವಿಚಾರ ಸಂಕಿರಣವೊಂದನ್ನು ಏರ್ಪಡಿಸಲಾಗಿತ್ತು. ಧಾರವಾಡ ಹಾಗೂ ಇತರೆಡೆಗಳಿಂದ ಬಂದ ಸುಮಾರು 75 ಜನ ಪ್ರತಿನಿಧಿಗಳು ವಿಚಾರಸಂಕಿರಣದಲ್ಲಿ ಪಾಲ್ಗೊಂಡಿದ್ದರು. ದಿನಾಂಕ 26ರಂದು ಬೆಳಿಗ್ಗೆ ಕರ್ನಾಟಕ ವಿಶ್ವವಿದ್ಯಾಲಯದಲ್ಲಿ ರಾಜಕೀಯ ಶಾಸ್ತ್ರ ವಿಭಾಗದ ಮುಖ್ಯಸ್ಥರಾದ ಡಾ| ಎ. ಎಂ. ರಾಜಶೇಖರಯ್ಯ ಅವರು ವಿಚಾರಸಂಕಿರಣವನ್ನು ಉದ್ಘಾಟಿಸಿದರು. ಮಾರ್ಕ್ಸ್ ಅಗಲಿ ನೂರು ವರ್ಷಗಳು ಸಂದರೂ ಅವನ ವಿಚಾರಗಳು ಜೀವಂತವಾಗಿವೆಯೆಂಬುದಕ್ಕೆ ಪುರಾವೆ ಬೇಕಿಲ್ಲ ಎಂದವರು ತಮ್ಮ ಉದ್ಘಾಟನಾ ಭಾಷಣದಲ್ಲಿ ಹೇಳಿದರು. "ಮಾರ್ಕ್ಸ್‌ರವರ ಹೆಸರು ಯುಗ ಯುಗಗಳಲ್ಲಿಯೂ ಮೊಳಗುತ್ತದೆ. ಹಾಗೆಯೇ ಅವರ ಕೆಲಸವೂ ಕೂಡ" ಎಂಬ ಭವಿಷ್ಯವಾಣಿಯೊಂದಿಗೆ ಮುಕ್ತಾಯಗೊಳ್ಳುವ ಎಂಗೆಲ್ಸರ ಮಾರ್ಕ್ಸ್ ಸಮಾಧಿ ಬಳಿಯ ಪ್ರಖ್ಯಾತ ಭಾಷಣವನ್ನು ನಿತ್ಯಾನಂದ ಸ್ವಾಮಿಜಿಯವರು ಓದಿದರು. ಡಾ| ವಿ. ಎನ್. ದೇಶಪಾಂಡೆಯವರು ಬಣ್ಣಿಸಿದ ಮಾರ್ಕ್ಸ್ ಜೀವನ ಚರಿತ್ರೆಯೊಂದಿಗೆ ಉದ್ಘಾಟನಾ ಸಭೆ ಕೊನೆಗೊಂಡಿತು.

ವಿಚಾರಸಂಕಿರಣವನ್ನು ಬೇರೆ ಬೇರೆ ವಿಷಯಗಳಿಗೆ ಸಂಬಂಧಿಸಿ ನಾಲ್ಕು ಗೋಷ್ಠಿಗಳಲ್ಲಿ ನಡೆಸಲಾಯಿತು. ಮೊದಲ ಗೋಷ್ಠಿಯಲ್ಲಿ ಮಾರ್ಕ್ಸ್‌ವಾದದ ತತ್ವಜ್ಞಾನಾತ್ಮಕ ತಳಹದಿಯನ್ನು ಕುರಿತು ಡಾ. ಬಿ. ಕೆ. ಕೃಷ್ಣಮೂರ್ತಿ, ಪ್ರೊ. ಕೆ. ಎಸ್. ಶರ್ಮಾ ಹಾಗೂ ಕಾ| ಸುಧೀಂದ್ರ ಕುಲಕರ್ಣಿಯವರು ಮಾತನಾಡಿ ದ್ವಂದ್ವಾತ್ಮಕ ಭೌತವಾದ ಹಾಗೂ ಚಾರಿತ್ರಿಕ ಭೌತವಾದದ ವಿವರಣೆ ನೀಡಿದರು. ಚರಿತ್ರೆಯಲ್ಲಿ ಭಾವನಾವಾದ ಹಾಗೂ ಭೌತವಾದಗಳ ಬೆಳವಣಿಗೆಯು ವರ್ಗ ಹೋರಾಟದ ಬೆಳವಣಿಗೆಯೊಂದಿಗೆ ಸಂಬಂಧ ಹೊಂದಿದ್ದನ್ನು ಹಾಗೂ ಮಾರ್ಕ್ಸ್‌ನ ವಿಶೇಷ ಕೊಡುಗೆಯನ್ನು ಅವರು ವಿವರಿಸಿದರು. ಮಾರ್ಕ್ಸ್ ಹಾಗೂ ಕಲೆ, ಸಾಹಿತ್ಯ ಮತ್ತು ಸಂಸ್ಕೃತಿ ಎರಡನೆ ಗೋಷ್ಠಿಯ ವಿಷಯವಾಗಿತ್ತು. ಸಿ. ವೀರಣ್ಣ ಅವರು ಉತ್ಪಾದನಾ ವ್ಯವಸ್ಥೆಯಲ್ಲಿಯ ಬದಲಾವಣೆಗಳು ಕಲೆ ಹಾಗೂ ಸಾಹಿತ್ಯದ ಬೆಳವಣಿಗೆಯನ್ನು ಪ್ರಭಾವಿತಗೊಳಿಸುವ ರೀತಿಯನ್ನು ಕುರಿತು ಮಾತನಾಡಿದರು. ಕಲಾಸೃಷ್ಟಿಯ ಪ್ರಕ್ರಿಯೆಯನ್ನು ಸಂಕುಚಿತ ಹಾಗೂ ಸರಳೀಕೃತ ರೀತಿಯಲ್ಲಿ ನೋಡಲಾಗದೆಂದು ಮಾರ್ಕ್ಸ್-ಎಂಗಲ್ಸರೇ ಹೇಳಿದುದನ್ನು ಒತ್ತಿ ಹೇಳಿದ ಅವರು ಸಾಹಿತ್ಯವು ಸಮಾಜದ ಅಧ್ಯಯನದಲ್ಲಿ ತನ್ನದೇ ಆದ ವಿಶಿಷ್ಟ ರೀತಿಯ ಕಣ್ಣೋಟ ಒದಗಿಸುತ್ತದೆ ಎಂದರು. ಬಾಲ್ಜಾಕ್, ಟಾಲ್‌ಸ್ಟಾಯ್, ಕನಕದಾಸ ಹಾಗೂ ಗೋಪಾಲಕೃಷ್ಣ ಅಡಿಗರ ಉದಾಹರಣೆ ಕೊಟ್ಟು ಕಲಾಕಾರನೊಬ್ಬನ ಕೃತಿಗಳಲ್ಲಿ ಅಂತರ್ವೈರುಧ್ಯಗಳಿರುವ ಸಾಧ್ಯತೆಯಿದೆ ಎಂದು ಹೇಳಿದ ಅವರು ಇಂಥ ಅಂತರ್ವೈರುಧ್ಯಗಳನ್ನು ಮಾರ್ಕ್ಸ್‌ವಾದಿ ದೃಷ್ಟಿಕೋನದಿಂದ ತಿಳಿದುಕೊಳ್ಳುವ ರೀತಿಯನ್ನು ಅವರು ವಿವರಿಸಿದರು. ಕಾ| ತೋಂಟದಾರ್ಯ ಅವರು ಬರೆದ "ಮಾರ್ಕ್ಸ್ ಹಾಗೂ ಹಿಂದೂ ಸಂಸ್ಕೃತಿ" ಪ್ರಬಂಧವನ್ನು ಗೋಷ್ಠಿಯಲ್ಲಿ ಓದಲಾಯಿತು.

"ಮಾರ್ಕ್ಸ್ ಹಾಗೂ ಕ್ರಾಂತಿಕಾರಿ ಚಳುವಳಿಗಳು" ದಿನಾಂಕ 27ರಂದು ಬೆಳಗಿನ ಗೋಷ್ಠಿಯ ವಿಷಯವಾಗಿತ್ತು. "ಮಾರ್ಕ್ಸ್‌ವಾದ ಮತ್ತು ಸಾಮೂಹಿಕ ಆಂದೋಲನಗಳು" ಕುರಿತು ಮಾತನಾಡಿದ ಕಾ| ಪಿ. ರಾಮಚಂದ್ರರಾವ್ ಅವರು ಕ್ರಾಂತಿಯನ್ನು ನೆರವೇರಿಸುವರು ಜನತೆಯೇ ಆದ್ದರಿಂದ ಜನತೆಯನ್ನು ಸಂಘಟಿಸಿ ಹೋರಾಟದಲ್ಲಿಳಿಸುವ, ರಾಜಕೀಯವಾಗಿ ಜಾಗೃತಗೊಳಿಸುವ ಪ್ರದೀರ್ಘ ಕಷ್ಟಕರವಾದ ಮತ್ತು ತಾಳ್ಮೆ-ತ್ಯಾಗಗಳು ಅಗತ್ಯವಿರುವ ಮಾರ್ಗವೊಂದೇ ಕಮ್ಯುನಿಸ್ಟರು ಅನುಸರಿಸಬೇಕಾದ ಮಾರ್ಗವೆಂಬುದನ್ನು ಅತ್ಯಂತ ಸರಳ ಸುಂದರ ರೀತಿಯಲ್ಲಿ ವಿಶದಗೊಳಿಸಿದರು. ನಕ್ಸಲವಾದಿ ಮತ್ತಿತರ ಉಗ್ರವಾದಿಗಳ ಮಾರ್ಗ ಮಾರ್ಕ್ಸ್‌ವಾದ–ಲೆನಿನ್ ವಾದಕ್ಕೆ ವಿರೋಧಿಯಾಗಿರುವುದನ್ನು ಅವರು ವಿವರಿಸಿದರು. ಕಾ| ವಿ. ಎನ್. ಹಳಕಟ್ಟಿಯವರು ಭಾರತದಲ್ಲಿ ಕಿಸಾನ್ ಆಂದೋಲನದ ಬೆಳವಣಿಗೆಯ ಕುರಿತು ಮಾತನಾಡುತ್ತ ಭಾರತದ ಜನತಾ ಪ್ರಜಾಪ್ರಭುತ್ವ ಕ್ರಾಂತಿಯ ಸಾಮ್ರಾಜ್ಯವಾದ ವಿರೋಧಿ, ಗುತ್ತೇದಾರಿ ವಿರೋಧಿ, ಜಮೀನುದಾರ ವಿರೋಧಿ ಅಂಗಗಳನ್ನು ಲಕ್ಷ್ಯದಲ್ಲಿಟ್ಟುಕೊಂಡೇ ರೈತ ಚಳುವಳಿಯ ಧೋರಣೆಗಳನ್ನು ರೂಪಿಸುವ ಅವಶ್ಯಕತೆಯನ್ನು ಎತ್ತಿ ತೋರಿಸಿದರು. ಭೂಮಿ ಪ್ರಶ್ನೆಯು ಕಿಸಾನ್ ಚಳುವಳಿಯ ಕೇಂದ್ರ ಪ್ರಶ್ನೆಯಾಗಿ ಉಳಿದುಕೊಂಡಿದ್ದರೂ ಕೂಡ ಕೃಷಿ ಉತ್ಪನ್ನಗಳಿಗೆ ಬೆಂಬಲಿತ ಬೆಲೆ, ಕನಿಷ್ಠ ವೇತನ ಮುಂತಾದ ಪ್ರಶ್ನೆಗಳು ಪ್ರಸಕ್ತ ಪರಿಸ್ಥಿತಿಯಲ್ಲಿ ಪ್ರಾಮುಖ್ಯತೆ ಪಡೆದಿವೆಯೆಂದವರು ನುಡಿದರು. ದಲಿತ ಪ್ರಶ್ನೆಯ ಕುರಿತು ಡಾ| ರಾಜಶೇಖರಯ್ಯ ಮಾತನಾಡಿದರು. ಜಾತಿ ವಿರೋಧಿ ಹೋರಾಟದಲ್ಲಿ ಕಮ್ಯುನಿಸ್ಟರ ಪಾತ್ರವನ್ನು ಕುರಿತು ಸಭಿಕರು ಕೇಳಿದ ಪ್ರಶ್ನೆಗಳಿಗೆ ಕಾ| ರಾಮಚಂದ್ರ ರಾವ್ ಅವರು ಉತ್ತರಿಸಿದರು ಅವರು ಕಾರ್ಮಿಕ, ವಿದ್ಯಾರ್ಥಿ ಮುಂತಾದ ಜನವಿಭಾಗಗಳಲ್ಲಿ ದಲಿತರ ಬೇರೆಯೇ ಆದ ಸಂಘಟನೆ ಕಟ್ಟುವುದು ಪ್ರತ್ಯೇಕತಾವಾದಕ್ಕೆ ಎಡೆ ಮಾಡಿಕೊಡುತ್ತದಲ್ಲದೇ ಪ್ರಜಾಪ್ರಭುತ್ವ ಚಳುವಳಿಗೆ ಧಕ್ಕೆಯುಂಟು ಮಾಡುತ್ತದೆ ಎಂಬುದನ್ನು ಸ್ಪಷ್ಟಪಡಿಸಿದರು. ಮಧ್ಯಾಹ್ನದ ಕೊನೆಯ "ಭಾರತದಲ್ಲಿ ಮಾರ್ಕ್ಸ್" ಕುರಿತು ಡಾ| ವಿ. ಎನ್. ದೇಶಪಾಂಡೆಯವರು ಭಾರತದ ಕುರಿತು ಮಾರ್ಕ್ಸ್‌ನ ಬರವಣಿಗೆಯನ್ನು ಪರಿಚಯಿಸಿಕೊಟ್ಟರು. ಕಾ| ರಾಮಚಂದ್ರ ರಾವ್ ಅವರು ಭಾರತದಲ್ಲಿ ರಾಷ್ಟ್ರೀಯ ವಿಮೋಚನಾ ಚಳುವಳಿ ಹಾಗೂ ಕಮ್ಯುನಿಸ್ಟ್ ಚಳುವಳಿಯ ಬೆಳವಣಿಗೆಯ ಸಂಕ್ಷಿಪ್ತ ವರ್ಣನೆ ನೀಡಿದರು.

ಈ ಸಂದರ್ಭದಲ್ಲಿ ಮಾರ್ಕ್ಸ್ ಜೀವನಕ್ಕೆ ಸಂಬಂಧಿಸಿದ ಪೋಸ್ಟರ್ ಪ್ರದರ್ಶನ ಹಾಗೂ ಪುಸ್ತಕ ಪ್ರದರ್ಶನ ಮತ್ತು ಮಾರಾಟವನ್ನು ಆಯೋಜಿಸಲಾಗಿತ್ತು.

ವರದಿ : **ಸುಧೀಂದ್ರ ಕುಲಕರ್ಣಿ**

ದಲಿತರ ಮೇಲೆ ನಡೆದಿರುವ ದಬ್ಬಾಳಿಕೆಯ ಖಂಡನೆ

ಮಲೆನಾಡಿನ ಪ್ರದೇಶದಲ್ಲಿ ದುರ್ಬಲ ವರ್ಗದ ಜನರ ಮೇಲೆ ತೋಟಗಳ ಮಾಲೀಕ ವರ್ಗ ಅಮಾನುಷ ದಬ್ಬಾಳಿಕೆ ದೌರ್ಜನ್ಯಗಳನ್ನು ನಡೆಸುತ್ತಲೇ ಬಂದಿದೆ. ಪ್ರಜಾಪ್ರಭುತ್ವ ಚಳುವಳಿ ಆ ಪ್ರದೇಶದಲ್ಲಿ ಬಲವಾಗಿ ಬೆಳೆದಿರುವುದರಿಂದ ಇಂಥ ಕ್ರೂರ ಕೃತ್ಯಗಳನ್ನು ತಡೆಯಲು ಸಾಧ್ಯವಾಗುತ್ತಿಲ್ಲ.

ಮಾರ್ಚ್ 25ರಂದು ಸಕಲೇಶಪುರ ತಾಲ್ಲೂಕಿನ [illegible] ಸ್ಥಳೀಯ ಕಾಫಿ ತೋಟದ ಮಾಲಿಕರ ಪಿತೂರಿಯಿಂದಾಗಿ ಹರಿಜನರ ಮೇಲೆ ದಬ್ಬಾಳಿಕೆ ನಡೆದಿರುವುದನ್ನು ಸಿ.ಪಿ.ಐ (ಎಂ)ನ ಮಲೆನಾಡು ಪ್ರಾದೇಶಿಕ ಸಮಿತಿ ಬಲವಾಗಿ ಖಂಡಿಸಿದೆ. ಆ ದಿವಸ ದುರ್ಬಲ ಹರಿಜನ ಕಾರ್ಮಿಕರು ಬಲವಾದ ಏಟಿಗೆ ತುತ್ತಾಗಿ ಸರ್ಕಾರಿ ಆಸ್ಪತ್ರೆಗೆ ಸೇರುವಂತಾಗಿದೆ.

ಒಬ್ಬಿಬ್ಬರು ಹರಿಜನ ಪುಂಡರಿದ್ದಾರೆಂಬ ನೆಪ ಮುಂದೆ ಮಾಡಿ ಇಡೀ ದಲಿತ ವರ್ಗದ ಮೇಲೆ ಹಲ್ಲೆ ನಡೆದಿರುವುದು ಖಂಡನೀಯ. ಸ್ಥಳೀಯ ಜೇಸೀಸ್ ಮಹಿಳೆಯರು ಹಳೆಯ ಬಟ್ಟೆಗಳನ್ನು ಸಂಗ್ರಹಿಸಿ ಹರಿಜನ ಮಕ್ಕಳಿಗೆ ಹಂಚುತ್ತಿದ್ದರು. ಕೆಲವು ಸ್ವಾಭಿಮಾನಿ ಯುವಕರು ಇದನ್ನು ವಿರೋಧಿಸಿದಾಗ ತೋಟದ ಮಾಲಿಕರು ಅಂಗಡಿ, ಹೋಟೆಲು ಮೊದಲಾದ ಮಾಲಿಕರನ್ನು ಎತ್ತಿಕಟ್ಟಿ ಈ ಘರ್ಷಣೆಗೆ ಅವಕಾಶ ಮಾಡಿ ಕೊಟ್ಟಿದ್ದಾರೆ.

ಪೋಲೀಸರು ಕೂಡಲೇ ಸ್ಥಳಕ್ಕೆ ಧಾವಿಸಿ, ಪರಿಸ್ಥಿತಿಯನ್ನು ಹತೋಟಿಗೆ ತಂದಿರುವುದು ಸರಿಯಾಗಿದೆ. ಇದರಿಂದ ಗಂಡಾಂತರ ಪರಿಸ್ಥಿತಿ ತಪ್ಪಿದೆ. ಆದರೆ ಸಕಲೇಶಪುರದ ಗ್ರಾಮಾಂತರ ಪೋಲೀಸರು ಮಾತ್ರ ಶಾಂತಿ ಪಾಲನೆಯ ಕರ್ತವ್ಯ ಮಾಡದೆ, ರೈತ ಸಂಘದ, ದಲಿತ ಸಂಘರ್ಷ ಸಮಿತಿಯ [illegible] ನಿರಪರಾಧಿಗಳ ಮೇಲೆ 107ನೇ ಸೆಕ್ಷನ್ ಹೇರಿರುವುದು ಖಂಡನೀಯ.

ದಲಿತ ವರ್ಗದ, ಇತರ ಸಾರ್ವಜನಿಕರ ರಕ್ಷಣೆ ಮಾಡುವುದು ಪೋಲೀಸರ ಕರ್ತವ್ಯ. ಜನರಲ್ಲಿ ಜಾತೀಯ ಭಾವನೆಯನ್ನು ಉಂಟು ಮಾಡುವ ತೋಟ ಮಾಲಿಕರ ಇತರ ಜಾತೀವಾದಿಗಳ ವಿರುದ್ಧ ಯೋಗ್ಯ ಕ್ರಮ ತೆಗೆದುಕೊಳ್ಳಬೇಕೆಂದು ಒತ್ತಾಯ ಮಾಡುತ್ತ ಎಲ್ಲ ಎಡ ಮತ್ತು ಪ್ರಜಾಪ್ರಭುತ್ವ ಶಕ್ತಿಗಳೂ, ಪೋಲೀಸರ ದಬ್ಬಾಳಿಕೆಯ ವಿರುದ್ಧ ಮಾಲಿಕರ ಸಮಾಜ ದ್ರೋಹಿಗಳ ವಿರುದ್ಧ ಹೋರಾಡಬೇಕೆಂದು ಸಿ.ಪಿ.ಐ (ಎಂ.) ಮಲೆನಾಡು ಪ್ರಾದೇಶಿಕ ಸಮಿತಿ ಕರೆಕೊಟ್ಟಿದೆ.

ರೈತ ಮತ್ತು ಕೃಷಿ ಕಾರ್ಮಿಕ ಸಂಘ ಪ್ರಾರಂಭ

ದಿನಾಂಕ 27-3-83 ರ ಭಾನುವಾರ ಪಂಚಾಕ್ಷರಯ್ಯರ ಪ್ರಾಂಗಣದಲ್ಲಿ ತುಮಕೂರು ತಾಲ್ಲೂಕು ಕುಪ್ಪೂರು ಗ್ರೂಪ್ ಪಂಚಾಯ್ತಿ ಮಟ್ಟದ ರೈತರ ಮತ್ತು ಕೃಷಿ ಕಾರ್ಮಿಕರ ಸಾಮೂಹಿಕ ಸಭೆಯು ಪಂಚಾಯ್ತಿ ಅಧ್ಯಕ್ಷರಾದ ಶ್ರೀ ಹೆಚ್.ಎಂ. ಸಿದ್ದಪ್ಪನವರ ಅಧ್ಯಕ್ಷತೆಯಲ್ಲಿ ಸೇರಿ ರೈತರ ಮತ್ತು ಕೃಷಿ ಕಾರ್ಮಿಕರ ಸಂಘವನ್ನು ಸ್ಥಾಪಿಸಲಾಯಿತು. ಶ್ರೀ ಕೆ. ಚೆನ್ನಯ್ಯನವರು ಸಭಿಕರನ್ನು ಸ್ವಾಗತಿಸಿದರು. ಊರುಕೆರೆಯ ರೈತ ಸಂಘದ ಸಂಘಟನಾ ಕಾರ್ಯದರ್ಶಿಗಳಾದ ಶ್ರೀ ಎ. ರಂಗಪ್ಪ ದಾಸ್‌ರವರ ಭಾಷಣದ ನಂತರ ತುಮಕೂರು ಜಿಲ್ಲಾ ರೈತ ಸಂಘದ ಅಧ್ಯಕ್ಷರಾದ ಶ್ರೀ ಟಿ.ಕೆ. ಗೋವಿಂದರಾಜುರವರು ಸಂಘದ ಧ್ಯೇಯೋದ್ದೇಶಗಳು ಮತ್ತು ರೈತರ ಅಗತ್ಯಗಳ ಬಗ್ಗೆ ಮಾತನಾಡಿದರು. ಇದೇ ಸಂದರ್ಭದಲ್ಲಿ ಊರುಕೆರೆ ರೈತ ಸಂಘದ ಶ್ರೀ ರುದ್ರಾರಾಧ್ಯರು ಸಂಘದ ಸ್ಥಾಪನೆ ಮತ್ತು ರೈತರ ಸಂಘಟನಾ ಕಾರ್ಯಗಳ ಬಗ್ಗೆ ಮಾತನಾಡಿದರು.

ಸಂಘದ ಪದಾಧಿಕಾರಿಗಳನ್ನಾಗಿ ಈ ಕೆಳಕಂಡವರನ್ನು ಆರಿಸಲಾಯಿತು. ಕೆ. ಚೆನ್ನಯ್ಯ ಅಧ್ಯಕ್ಷರು, ಶರಭಲಿಂಗ ಉಪಾಧ್ಯಕ್ಷರು, ಶಿವನಂಜಯ್ಯ ಕಾರ್ಯದರ್ಶಿ, ಬಂಡಿ ರಂಗಯ್ಯ ಸಹಕಾರ್ಯದರ್ಶಿ, ನರಸಿಂಹಯ್ಯ ಸಂಘಟನಾ ಕಾರ್ಯದರ್ಶಿ, ಹೆಚ್. ರಾಮಯ್ಯ ಖಜಾಂಚಿ ಮತ್ತು 19 ಜನರ ಕಾರ್ಯಕಾರಿ ಸಮಿತಿ ಸದಸ್ಯರನ್ನು ಚುನಾಯಿಸಲಾಯಿತು.

ಈ ಶಾಖೆಯನ್ನು ಅಖಿಲ ಭಾರತ ಕಿಸಾನ್ ಸಭಾದ ಅಂಗ ಸಂಸ್ಥೆಯಾದ ತುಮಕೂರು ಜಿಲ್ಲಾ ರೈತ ಸಂಘದೊಂದಿಗೆ ನೋಂದಾಯಿಸಲು ಮತ್ತು ಸಂಘದ ಕಾರ್ಯಾಲಯವು ಕುಪ್ಪೂರು ಗ್ರಾಮ ಪಂಚಾಯಿತಿಗೆ ಸೇರಿದ ಪಂಚ [illegible] ತೀರ್ಮಾನಿಸಲಾಯಿತು.

ಕುಂದಾಪುರ:

ಮೃತರ ಕುಟುಂಬಕ್ಕೆ ಸಹಾಯ

ತಾ|| 2-4-1983ರಂದು ಕುಂದಾಪುರ ಕೆಲಸಗಾರರ ಸಂಘದ ರಿಕ್ಷಾ ಚಾಲಕರ ವಿಭಾಗ (ಸಿ.ಐ.ಟಿ.ಯು.) ದವರು ತಾ|| 4-2-1983ರಂದು ಅಪಘಾತದಲ್ಲಿ ಮೃತಪಟ್ಟ ರಿಕ್ಷಾ ಚಾಲಕ ಮಂಜುನಾಥ ಆರ್. ನಾಯಕ್ ಇವರ ಕುಟುಂಬಕ್ಕೆ ಸಹಾಯಾರ್ಥವಾಗಿ ಸಾರ್ವಜನಿಕರಿಂದ ಸಂಗ್ರಹಿಸಿದ ರೂ. 2,267 (ಎರಡು ಸಾವಿರದ ಇನ್ನೂರ ಅರವತ್ತೇಳು)ನ್ನು ಮೃತಪಟ್ಟ ಮಂಜುನಾಥರವರ ಹೆಂಡತಿಯಾದ ಶ್ರೀಮತಿ ಬೇಬಿಯವರಿಗೆ ನೀಡಲಾಗಿದೆ.

ಕುಂದಾಪುರ ಕೆಲಸಗಾರರ ಸಂಘದ ಕಾರ್ಯದರ್ಶಿಯವರಾದ ಶ್ರೀ ಕೆ. ಶಂಕರ್‌ರವರು ರಿಕ್ಷಾ ಚಾಲಕ ಮಂಜುನಾಥರ ಬಡ ಕುಟುಂಬಕ್ಕೆ ಸಹಾಯ ನೀಡಿದ ರಿಕ್ಷಾ ಚಾಲಕರಿಗೂ ಹಾಗೂ ಸಾರ್ವಜನಿಕರಿಗೂ ಅಭಿನಂದನೆ ಸಲ್ಲಿಸಿರುತ್ತಾರೆ.

ನೆರೆ ಪರಿಹಾರ ವಿಳಂಬ ಪ್ರತಿಭಟಿಸಿ ಪ್ರದರ್ಶನ

ದಿನಾಂಕ 2-4-1983 ರಂದು ಕುಂದಾಪುರದಲ್ಲಿ ಮಾರ್ಕ್ಸ್‌ವಾದಿ ಕಮ್ಯುನಿಸ್ಟ್ ಪಕ್ಷದ ನೇತೃತ್ವದಲ್ಲಿ ನೆರೆ ಸಂತ್ರಸ್ತರಿಗೆ ನೆರೆ ಪರಿಹಾರವನ್ನು ವಿಳಂಬ ಮಾಡದೇ ಕೂಡಲೇ ಕೊಡಬೇಕೆಂದು ಒತ್ತಾಯಿಸಿ, ತಾಲ್ಲೂಕು ಕಛೇರಿ ಎದುರು ಮತ್ತು ಅಸಿಸ್ಟೆಂಟ್ ಕಮಿಷನರ್ ಕಛೇರಿಯ ಎದುರು ಬೆಳಿಗ್ಗೆ 10 ಘಂಟೆಯಿಂದ ಮಧ್ಯಾಹ್ನ 4 ಘಂಟೆಯ ವರೆಗೆ ಪ್ರತಿಭಟನಾ ಪ್ರದರ್ಶನ ನಡೆಸಲಾಯಿತು.

ಕಳೆದ ವರ್ಷ ಆಗಸ್ಟ್ 2ರಂದು ಬಂದ ನೆರೆಯಲ್ಲಿ ಮನೆಗಳನ್ನು ಕಳೆದುಕೊಂಡ ನೆರೆ ಸಂತ್ರಸ್ತರಿಗೆ ಈ ವರೆಗೆ ಅಲ್ಪ-ಸ್ವಲ್ಪ ಪರಿಹಾರ ಸಿಕ್ಕಿ, ಮನೆಗಳನ್ನು ಪೂರ್ಣ ಕಟ್ಟಲು ಸಾಧ್ಯವಾಗದೇ ಬಹಳ ಕಷ್ಟನಷ್ಟಗಳಿಗೆ ಒಳಗಾಗಿದ್ದಾರೆ. ಪರಿಹಾರವನ್ನು ವಿತರಣೆ ಮಾಡುವಲ್ಲಿ ಹಿಂದಿನ ಕಾಂಗ್ರೆಸ್ ಸರ್ಕಾರ ಮತ್ತು ಸಂಬಂಧಪಟ್ಟ ಅಧಿಕಾರಿಗಳು ವಿಳಂಬಮಾಡಿ ಬಡಜನರನ್ನು ಕಷ್ಟಕ್ಕೆ ಒಳಪಡಿಸಿರುವುದನ್ನು ಮಾರ್ಕ್ಸ್‌ವಾದಿ ಕಮ್ಯುನಿಸ್ಟ್ ಪಕ್ಷದ ತಾಲ್ಲೂಕು ಸಮಿತಿಯು ತೀವ್ರವಾಗಿ ಖಂಡಿಸಿದೆ. ಈಗಾಗಲೇ ಎಂಟು ತಿಂಗಳು ಕಳೆದರೂ, ಇನ್ನು ಒಂದು ತಿಂಗಳಲ್ಲಿ ಮಳೆಗಾಲ ಆರಂಭವಾಗಲಿದ್ದು, ಈ ವರೆಗೆ ಖರ್ಚು ಮಾಡಿದ ಹಣ ಮತ್ತು ಪೂರ್ಣವಾಗದ ಮನೆ ಕಳೆದುಕೊಳ್ಳುವ ಪರಿಸ್ಥಿತಿ ಬರಲಿದೆ.

ಅಸಿಸ್ಟೆಂಟ್ ಕಮೀಷನರ್ ಕುಂದಾಪುರ ಇವರು ಮಾರ್ಕ್ಸ್‌ವಾದಿ ಕಮ್ಯುನಿಸ್ಟ್ ಪಕ್ಷದ ಮುಂದಾಳುಗಳನ್ನು ಹಾಗೂ ನೆರೆ ಸಂತ್ರಸ್ತರನ್ನು ಕಂಡು ಮಾತನಾಡಿ ವಿಳಂಬವಾಗದೆ ಉಳಿದ ಪರಿಹಾರ ಹಾಗೂ ಸವಲತ್ತುಗಳನ್ನು ಕೊಡಲು ತಮ್ಮಿಂದ ಆಗುವ ಪ್ರಯತ್ನ ಮಾಡುವುದಾಗಿ ತಿಳಿಸಿದರು. ಪರಿಹಾರ ಕೂಡಲೆ ಸಿಗುವಂತೆ ವ್ಯವಸ್ಥೆ ಮಾಡಲು ರಾಜ್ಯದ ಮುಖ್ಯ ಮಂತ್ರಿಗೆ ಟೆಲಿಗ್ರಾಂ ಮೂಲಕ ಒತ್ತಾಯಿಸಲಾಗಿದೆ.

ಪ್ರತಿಭಟನಾ ಪ್ರದರ್ಶನದ ನೇತೃತ್ವವನ್ನು ಮಾರ್ಕ್ಸ್‌ವಾದಿ ಕಮ್ಯುನಿಸ್ಟ್ ಪಕ್ಷದ ಮುಂದಾಳುಗಳಾದ ಕಾ|| ಅಬ್ರಹಾಂ ಕರ್ಕಡ, ಕಾ|| ಕೆ. ಶಂಕರ್ ಮತ್ತು ಕಾ|| ಸಿ. ನಾರಾಯಣ ಇವರು ವಹಿಸಿದ್ದರು.

ಏಪ್ರಿಲ್ 29 ರಂದು ರಾಜ್ಯಾದ್ಯಂತ ಬೀಡಿ ಕಾರ್ಮಿಕರ ಪಿಕೆಟಿಂಗ್

ರಾಜ್ಯದ ಬೀಡಿ ಕಾರ್ಮಿಕರು ತಮ್ಮ ಬೇಡಿಕೆಗಳಾದ ಕಂಟ್ರಾಕ್ಟ್ ಪದ್ಧತಿಯ ರದ್ಧತಿ, ಕೂಲಿಹೆಚ್ಚಳ, ಬೋನಸ್ ಹೆಚ್ಚಳಕ್ಕಾಗಿ ನಿರಂತರ ಹೋರಾಟ ನಡೆಸುತ್ತಾ ಬಂದು 1982ರಲ್ಲಿ ಮಜೂರಿ ನಿರ್ಣಯದ ಬಗ್ಗೆ ಸಾವಿರ ಬೀಡಿಗೆ ರೂ. 8-10 ನಿಗದಿ ಮಾಡುವ ಕನಿಷ್ಟ ವೇತನ ಸಲಹಾ ಸಮಿತಿಯ ಎಲ್ಲಾ ಸಲಹೆಗಳನ್ನು ಹಿಂದಿನ ಕಾಂಗ್ರೆಸ್ ಸರ್ಕಾರದ ಕಾರ್ಮಿಕ ಸಚಿವರಾಗಿದ್ದ ಜಕನೂರ್‌ರವರು ಮಾಲೀಕರ ಹಿತರಕ್ಷಣೆ ಮಾಡಲು ಮಾಲಿಕರಿಂದ ಲಂಚಪಡೆದು 8-10 ಪೈಸೆ ಬದಲು 7-40 ಪೈಸೆ ನಿರ್ಣಯಿಸಿ ರಾಜ್ಯದ ಲಕ್ಷಾಂತರ ಬೀಡಿ ಕಾರ್ಮಿಕರಿಗೆ ದ್ರೋಹ ಬಗೆದಾಗ ಬಂದ ಪ್ರತಿಭಟನೆಯಿಂದ ತಪ್ಪಿಸಿಕೊಳ್ಳಲು ರೂ. 7-40 ಮಜೂರಿಯನ್ನು 1982ಕ್ಕೆ ಒಂದು ವರ್ಷಕ್ಕೆ

(8ನೇ ಪುಟ ನೋಡಿ)

ಕ್ಯಾಪಿಟೇಶನ್ ಶುಲ್ಕ ಸಮಸ್ಯೆ

ಶ್ರೀ

ಬಂಡವಾಳಶಾಹಿ ಸಮಾಜ ಪದ್ಧತಿಯಲ್ಲಿ ವಿದ್ಯಾರ್ಥಿಗಳೂ, ಪಾಲಕರೂ ಹಲವಾರು ಸಮಸ್ಯೆಗಳನ್ನೆದುರಿಸುವ ಜೊತೆಯಲ್ಲೇ ಕ್ಯಾಪಿಟೇಶನ್ ಶುಲ್ಕದ ಗಂಡಾಂತರವನ್ನೂ ಎದುರಿಸುತ್ತಿರುವುದು ಪ್ರಜ್ಞಾವಂತ ವಿದ್ಯಾರ್ಥಿಗಳಲ್ಲಿ ಕಳೆದ ಕೆಲವು ವರ್ಷಗಳಿಂದ ಪ್ರಕ್ಷೋಭೆಯನ್ನುಂಟುಮಾಡಿರುವ ಸಂಗತಿ ಎಲ್ಲರಿಗೂ ಗೊತ್ತು. ಖಾಸಗಿ ವಿದ್ಯಾಸಂಸ್ಥೆಗಳಿಗೆ ಶಿಕ್ಷಣದ ಜವಾಬ್ದಾರಿಯನ್ನು ಹೊರುವ ಮೂಲಭೂತ ಹಕ್ಕನ್ನು ದುರುಪಯೋಗಿಸುವ ಬಂಡವಾಳದಾರ ಭೂಮಾಲೀಕ ವರ್ಗದ ರಾಜಕೀಯ ಮುಖಂಡರಾದ ಇಂದಿರಾ ಗಾಂಧಿಯವರು ಕ್ಯಾಪಿಟೇಶನ್ ಶುಲ್ಕವನ್ನು ರದ್ದು ಮಾಡುವ ಆಶ್ವಾಸನೆಗಳನ್ನು ಕೊಡುತ್ತಾ ಬಂದಿದ್ದರೂ ಕೂಡ ತಮ್ಮ ವರ್ಗದ ಹಿತರಕ್ಷಣೆ ಮಾಡುವುದೇ ಪ್ರಾಧಾನ್ಯ ಗುರಿಯಾಗಿರುವಾಗ ಬಡ ಮತ್ತು ಮಧ್ಯಮ ವರ್ಗದ ವಿದ್ಯಾರ್ಥಿಗಳೂ ಪೋಷಕರೂ ಅನುಭವಿಸುತ್ತಿರುವ ಸಂಕಷ್ಟ ಮತ್ತು ತೊಂದರೆಗಳನ್ನು ನಿವಾರಿಸಲು ಮುಂದೆ ಬಾರದಿದ್ದರೆ ಆಶ್ಚರ್ಯಪಡಬೇಕಾಗಿಲ್ಲ.

ದೇಶದ ಕೆಲವೇ ರಾಜ್ಯಗಳಲ್ಲಿ ಈ ಪಿಡುಗು ಇರುವುದರಿಂದ ಇದರಿಂದಾಗಿ ಆ ರಾಜ್ಯಗಳ ಪ್ರತಿಭಾಶಾಲಿ ವಿದ್ಯಾರ್ಥಿಗಳೂ ಹತಾಶೆಗೊಳ್ಳುತ್ತಿದ್ದು, ಎಸ್.ಎಫ್.ಐ., ಎ.ಐ.ಎಸ್.ಎಫ್. ಸಿ.ಪಿ.ಐ.(ಎಂ.), ಸಿ.ಪಿ.ಐ. ಮೊದಲಾದ ಎಡ ಶಕ್ತಿಗಳಲ್ಲಿ, ಇಂಥ ಸಮಾಜ ವಿರೋಧೀ ಕ್ರಮವನ್ನು ತೀವ್ರವಾಗಿ ಖಂಡಿಸುತ್ತಲೂ ವಿರೋಧಿಸುತ್ತಲೂ ಬಂದಿದ್ದಾರೆ. ಪ್ರತಿಭಟನೆ ಈಗಲೂ ಮುಂದುವರಿಯುತ್ತಿದೆ. ಇದರ ಪರಿಣಾಮವಾಗಿ ಕರ್ನಾಟಕ ರಾಜ್ಯದ ಹಿಂದಿನ ಸರ್ಕಾರ 1981ರಲ್ಲಿ ಒಂದು ಆಜ್ಞೆಯ ಮೂಲಕ ಕ್ಯಾಪಿಟೇಶನ್ ಶುಲ್ಕವನ್ನು ನಿಧಾನವಾಗಿ ರದ್ದು ಪಡಿಸುವ ಆಜ್ಞೆ ಹೊರಡಿಸಿತ್ತು. ಇಂಜಿನಿಯರಿಂಗ್ ಕಾಲೇಜುಗಳ ಮಾಲಿಕರು ಇದರ ವಿರುದ್ಧ ಹೈಕೋರ್ಟಿನಲ್ಲಿ ದಾವಾ ಮಾಡಿದ್ದು, ಕ್ಯಾಪಿಟೇಶನ್ ಶುಲ್ಕವನ್ನು ಹಂತ ಹಂತವಾಗಿ ರದ್ದುಗೊಳಿಸುವ ಆಜ್ಞೆ ಸಂವಿಧಾನಕ್ಕೆ ವಿರೋಧವಾಗಿದೆಯೆಂಬ ಅಭಿಪ್ರಾಯವನ್ನು ನ್ಯಾಯಾಧೀಶರು ವ್ಯಕ್ತಮಾಡಿ ಸರ್ಕಾರ ಆಜ್ಞೆಯನ್ನು ರದ್ದುಪಡಿಸಿದ್ದಾರೆ. ಕ್ಯಾಪಿಟೇಶನ್ ಶುಲ್ಕವನ್ನು ರದ್ದುಪಡಿಸಬೇಕೆಂದು ಸರ್ಕಾರ ಆಜ್ಞೆ ಹೊರಡಿಸುವುದರ ವಿರುದ್ಧ ಖಾಸಗಿ ಕಾಲೇಜುಗಳ ಮಾಲಿಕರು ಹೈಕೋರ್ಟಿನಲ್ಲಿ ದಾವೆ ಹೂಡಿದ್ದರೂ ಕೂಡ ನೇರವಾಗಿ ಸಂಬಂಧಪಟ್ಟಿರುವ ವಿದ್ಯಾರ್ಥಿಗಳಾಗಲೀ ಪಾಲಕರಾಗಲೀ ಕೋರ್ಟಿನಲ್ಲಿ ಮಧ್ಯೆ ಪ್ರವೇಶಿಸಿ, ಸರ್ಕಾರದ ಆಜ್ಞೆಯನ್ನು ಬೆಂಬಲಿಸಲು ಮುಂದೆ ಬಾರದಿರುವುದರಿಂದಲೂ, ಖಾಸಗೀ ಕಾಲೇಜುಗಳ ಮಾಲಿಕರು ಪ್ರವೇಶ ಶುಲ್ಕವನ್ನು ಸಂಗ್ರಹಿಸುತ್ತಿರುವುದರಲ್ಲಿ ತಪ್ಪೇನಿಲ್ಲ, ಅದು ಅವರ ಕಾನೂನು ಬದ್ಧ ಹಕ್ಕು ಎಂಬ ರೀತಿಯಲ್ಲಿ ಕೋರ್ಟ್ ನಿರ್ಣಯ ನೀಡಿದೆ.

ತಮಗೆ ತಿಳಿದಂತೆ ನ್ಯಾಯನೀಡುವ ಹಕ್ಕು ಕೋರ್ಟುಗಳದ್ದು. ಆದರೆ ಜನತೆಗೆ ನ್ಯಾಯ ಸಿಗಬೇಕಾದರೆ ಕ್ಯಾಪಿಟೇಶನ್ ಶುಲ್ಕ ರದ್ದಾಗಲೇಬೇಕು. ವಿದ್ಯಾರ್ಥಿಗಳಿಗೆ ಪುಕ್ಕಟೆಯಾಗಿ ಶಿಕ್ಷಣ ಸಿಗಲೇಬೇಕು.

ಪ್ರತಿಭಾಶಾಲಿ ವಿದ್ಯಾರ್ಥಿಗಳಿಗೆ ಕ್ಯಾಪಿಟೇಶನ್ ಶುಲ್ಕ ಕೊಡಲು ಸಾಧ್ಯವಾಗದೇ ಅವರಿಗೆ ಹೆಚ್ಚಿನ ಅಭ್ಯಾಸಕ್ಕೆ ಅವಕಾಶವೇ ಇಲ್ಲವೆಂದಾಗುವುದು ಅತ್ಯಂತ ಹೀನ ಶಿಕ್ಷಣ ಪದ್ಧತಿಯೆಂದು ಹೇಳಲೇಬೇಕಾಗುತ್ತದೆ. ಅದನ್ನು ಖಂಡಿಸುವುದು ಮಾತ್ರವಲ್ಲ, ಅದರ ವಿರುದ್ಧ ಬಲವಾಗಿ ಚಳುವಳಿಯನ್ನು ನಡೆಸಲೇಬೇಕು. ಕೋರ್ಟುಗಳಿಂದ ನ್ಯಾಯ ಸಿಗಲಾರದಿದ್ದಾಗ ವಿದ್ಯಾರ್ಥಿಗಳ, ಪಾಲಕರ ಪ್ರಜಾಪ್ರಭುತ್ವ ಶಕ್ತಿಗಳ ಆಂದೋಲನದಿಂದಾದರೂ ಸಮಾಜದಲ್ಲಿ ಬೆಳೆದು ಬಂದಿರುವ ಈ ಕ್ಷಯರೋಗವನ್ನು ಕಿತ್ತುಹಾಕಲೇಬೇಕಾಗಿದೆ.

ದೇಶದಲ್ಲಿರುವ ಪ್ರತಿಭಾಶಾಲಿ ವಿದ್ಯಾರ್ಥಿಗಳ ಸೇವೆ ಸಮಾಜಕ್ಕೂ, ಜನರಿಗೂ ಸಿಗಬೇಕಾದರೆ, ದೇಶದ ಅಭಿವೃದ್ಧಿ ಕಾರ್ಯಗಳ ಹಿತದೃಷ್ಟಿಯಲ್ಲಿ ಯಾವ ಕರಾರುಗಳಿಲ್ಲದೆ ವಿದ್ಯಾರ್ಥಿಗಳು ಪಡೆದ ಮಾರ್ಕ್ಸ್‌ಗಳ ರೀತ್ಯಾ ಅವರಿಗೆ ಪ್ರವೇಶ ಸಿಗಲೇಬೇಕು. ಅದಕ್ಕಾಗಿ ಹೋರಾಟ ನಡೆಯಲೇಬೇಕು.

ಹರಿಹರ ಪಾಲಿಫೈಬರ್ಸ್

ಧರಣಿ ಸತ್ಯಾಗ್ರಹ ಅಂತ್ಯ

ಹರಿಹರ ಪಾಲಿಫೈಬರ್ಸ್ ಕನ್‌ಸ್ಟ್ರಕ್ಷನ್ ವರ್ಕರ್ಸ್ ಯೂನಿಯನ್ನಿನ ಕಾರ್ಮಿಕರು ತಮ್ಮ ನ್ಯಾಯಯುತ ಬೇಡಿಕೆಗಳನ್ನು ಒತ್ತಾಯಿಸಿ 26–3–83 ರಿಂದ ವಿಧಾನಸೌಧದೆದುರು ಧರಣಿ ಸತ್ಯಾಗ್ರಹವನ್ನು ನಡೆಸುತ್ತಿದ್ದರೂ ಕೂಡ ಸರ್ಕಾರ ಕಣ್ಣುಮುಚ್ಚಿ ಕುಳಿತಿರುವುದನ್ನು ಪ್ರತಿಭಟಿಸಿ ಸಂಘದ ಅಧ್ಯಕ್ಷರಾದ ಕಾ. ವಿ. ಜೆ. ಕೆ. ನಾಯರ್ ಅವರು 12-4-83 ರಂದು ಅಮರಣಾಂತ ಉಪವಾಸ ಸತ್ಯಾಗ್ರಹವನ್ನು ಪ್ರಾರಂಭಿಸಿದರು. ಅದೇ ದಿನ ಲೇಬರ್ ಕಮಿಷನರ್‌ರವರು ಸತ್ಯಾಗ್ರಹಿಗಳ ಶಿಬಿರಕ್ಕೆ ಭೇಟಿ ನೀಡಿ ಕಾರ್ಮಿಕರ ಬೇಡಿಕೆಗಳನ್ನು ತೀರ್ಮಾನಿಸಲು ಬೋರ್ಡ್ ಆಫ್ ಕನ್ಸಿಲಿಯೇಷನ್‌ಗೆ ಈ ವಿವಾದವನ್ನು ಒಪ್ಪಿಸುವ ಆಶ್ವಾಸನೆ ನೀಡಿದರು. ಹಾಗೂ ಬೀಗ ಮುದ್ರೆ ಮತ್ತು ಮುಷ್ಕರವನ್ನು ರದ್ದು ಮಾಡಿದರು.

ನಂತರ ಲೇಬರ್ ಕಮಿಷನರ್ ಅವರು ಕಾ. ವಿ. ಜೆ. ಕೆ. ನಾಯರ್ ಅವರಿಗೆ ಹಣ್ಣಿನ ರಸ ಕೊಟ್ಟು ಅಮರಣಾಂತ ಉಪವಾಸ ಸತ್ಯಾಗ್ರಹವನ್ನು ಮುಕ್ತಾಯಗೊಳಿಸಿದರು.

ಬೀಡಿ ಕಾರ್ಮಿಕರಿಂದ ಪಿಕೆಟಿಂಗ್

(7ನೇ ಪುಟದಿಂದ)

ಮಾತ್ರ ಎಂದೂ, 1983ರ ಜನವರಿಗೆ ಮಜೂರಿಯ ಬಗ್ಗೆ ಪುನರ್ವಿಮರ್ಶೆ ಹಾಗೂ ಮಜೂರಿ ಹೆಚ್ಚಳವಾಗಬೇಕೆಂದು ಅಭಿಪ್ರಾಯವಾಗಿತ್ತು.

ಆದರೆ 1983ರ ಜನವರಿಯಲ್ಲಿ, ರಾಜ್ಯ ವಿಧಾನಸಭೆಗೆ ಸಾರ್ವತ್ರಿಕ ಚುನಾವಣೆ ನಡೆದು ರಾಜ್ಯದ ಕಾರ್ಮಿಕ ವರ್ಗ ಕಾಂಗ್ರೈನ ಜನವಿರೋಧಿ ನೀತಿಯನ್ನು ವಿರೋಧಿಸಿ ಜನತಾ ಸರ್ಕಾರವನ್ನು ಅಧಿಕಾರಕ್ಕೆ ತಂದಿದೆ.

ಆದರೆ ಬೀಡಿ ಕಾರ್ಮಿಕರ ಬೇಡಿಕೆಗಳು ಹಾಗೇ ಉಳಿದಿದ್ದು ಇದರ ಬಗ್ಗೆ ಚರ್ಚಿಸಲು 20–3–83ರಂದು ರಾಜ್ಯ ಬೀಡಿ ಫೆಡರೇಷನ ಸಭೆಯು ಕಾ। ಮೂಸಬ್ಬರವರ ಅಧ್ಯಕ್ಷತೆಯಲ್ಲಿ ಸೇರಿ ಬೀಡಿ ಕಾರ್ಮಿಕರ ಬೇಡಿಕೆಗಳಾದ ಸಾವಿರ ಬೀಡಿಗೆ ರೂ. 12 ಮಜೂರಿ ಬೋನಸ್ಸು 8–33ರ ಬದಲು ಶೇ. 20 ಹಾಗೂ ಕಂಟ್ರಾಕ್ಟ್ ಪದ್ಧತಿ ರದ್ದಾಗಬೇಕೆಂದೂ, ಈ ಬೇಡಿಕೆಯನ್ನು ಪಡೆಯಲು ಮಾರ್ಚ್ 20ರಿಂದ ಬೇಡಿಕೆ ವಾರಾಚರಣೆ ಆಚರಿಸುತ್ತಾ ರಾಜ್ಯದ ಬೀಡಿ ಮಾಲೀಕರಿಗೂ, ಸರಕಾರದ ಕಾರ್ಮಿಕ ಸಚಿವರ ಗಮನಕ್ಕೂ ತರಲಾಗಿದೆ. ಬೇಡಿಕೆಗಳು ಈಡೇರದ ಪಕ್ಷದಲ್ಲಿ 25–4–83ರಂದು ರಾಜ್ಯಾದ್ಯಂತ ಬೀಡಿ ಕಾರ್ಖಾನೆಗಳ ಎದುರು ಪಿಕೇಟಿಂಗ್ ಮಾಡುವ ಮೂಲಕ ಸಿದ್ಧರಾಗಬೇಕೆಂದು ಎಲ್ಲಾ ಕಾರ್ಮಿಕರಿಗೆ ಕರೆ ನೀಡಲಾಗಿದೆ.

ಈಗಾಗಲೇ ದಕ್ಷಿಣ ಕನ್ನಡ ಮತ್ತು ತುಮಕೂರು ಜಿಲ್ಲೆ ಮತ್ತಿತರ ಕಡೆಗಳ ಬೇಡಿಕೆಗಳ ಪಟ್ಟಿಯನ್ನು ಮಾಲೀಕರಿಗೂ ಕಾರ್ಮಿಕ ಸಚಿವರಿಗೂ ನೀಡಲಾಗಿದೆ. ಇದರ ಬಗ್ಗೆ ಸರ್ಕಾರ ಹಾಗೂ ಮಾಲೀಕರು ಗಮನ ಹರಿಸಿಲ್ಲ

ಆದ್ದರಿಂದ ಕಾರ್ಮಿಕರ ಬೇಡಿಕೆಗಳನ್ನು ಪಡೆಯಲು ಕಾರ್ಮಿಕರು ನಿರಂತರ ಹೋರಾಟ ನಡೆಸಬೇಕೆಂದು ಫೆಡರೇಷನ್ ಪ್ರಧಾನ ಕಾರ್ಯದರ್ಶಿ ಕಾಮ್ರೇಡ್ ದಸ್ತಗೀರ್‌ರವರು ಕರೆ ಕೊಟ್ಟಿದ್ದಾರೆ.

ಮನವಿ

(6ನೇ ಪುಟದಿಂದ)

ಪೂರ್ಣಗೊಳ್ಳಬೇಕು. ಸಾಕಾಗುವಷ್ಟು ಹಣಕಾಸು ಕೂಡಲೇ ಮಂಜೂರು ಮಾಡಬೇಕು.

19. ತುರ್ತಾಗಿ ನೆರೆ ಅಪಾಯಗಳನ್ನು ತಡೆಯಲು ನೇತ್ರಾವತಿ ಮತ್ತು ಇನ್ನಿತರ ನದಿಗಳಿಗಾಗಿ ಯೋಜಿಸಿದ ಕ್ರಮಗಳನ್ನು ಕಾರ್ಯರೂಪಕ್ಕೆ ತರಬೇಕು.

20. 1974ರಲ್ಲಿ ನೆರೆ ನೀಡಿರುವುದನ್ನು ರದ್ದು ಮಾಡಬೇಕು. 1982ರಲ್ಲಿ ಮಂಜೂರು ಮಾಡಿದ ನೆರೆ ಪರಿಹಾರವನ್ನು ಕೂಡಲೇ ನೀಡಬೇಕು.

21. ನಿಶ್ಚಿತ ನಿಗದಿಗೊಳಿಸಿದ ಅವಧಿಯಲ್ಲಿ ಮರುಪಾವತಿ ಮಾಡಲು ಸಾಧ್ಯವಾಗದವರಿಗೆ ಹಾಕಲಾಗುವ ಸುಸ್ತಿ ಬಡ್ಡಿ ನೀತಿಯನ್ನು ರದ್ದು ಮಾಡಬೇಕು.

ಸಿ. ಐ. ಟಿ. ಯು. ೫ನೇ ಸಮ್ಮೇಳನ

(3ನೇ ಪುಟದಿಂದ)

ತಡೆಯಲು ಯತ್ನಿಸುತ್ತಿದೆ. ಮುಷ್ಕರ ನಿರತ ಕಾರ್ಮಿಕರಮೇಲೆ ಬರ್ಬರ ದಮನ ಕ್ರಮ ಕೈಗೊಳ್ಳಲಾಗುತ್ತಿದೆ. ಇವನ್ನು ನಾವೆಲ್ಲಾ ಬಲವಾಗಿ ಖಂಡಿಸಬೇಕು. ಕೇವಲ ಪಶ್ಚಿಮ ಬಂಗಾಳ ಹಾಗೂ ಕೇರಳದ ಎಡ ಸರಕಾರಗಳು ಮಾತ್ರ ಕಾರ್ಮಿಕರ ಹಕ್ಕುಗಳಿಗೆ ರಕ್ಷಣೆ ನೀಡಿವೆ; ದಮನ ಯಂತ್ರವನ್ನು ಕಾರ್ಮಿಕರ ವಿರುದ್ಧ ಉಪಯೋಗಿಸಲಾಗುತ್ತಿಲ್ಲ."

ದೌರ್ಬಲ್ಯಗಳು– ಸಮಸ್ಯೆಗಳು :

ಕಾ। ರಣದಿವೆಯವರು ನಮ್ಮ ಸಂಘಗಳ ಕೆಲವು ದೌರ್ಬಲ್ಯಗಳನ್ನು ಪರಿಶೀಲಿಸಿ ಅದನ್ನು ನಿವಾರಿಸುವ ಬಗ್ಗೆ ಯೋಚಿಸಬೇಕೆಂದೂ ಕರೆ ನೀಡಿದ್ದಾರೆ, "ಕಾರ್ಮಿಕರ ಹಿತಾಸಕ್ತಿಗಳನ್ನು ರಕ್ಷಿಸುವಲ್ಲಿ, ಕಾರ್ಮಿಕ ಆಂದೋಲನದಲ್ಲಿ ಐಕ್ಯ ಮೂಡಿಸುವ ಪ್ರಯತ್ನದಲ್ಲಿ ನಮ್ಮ ಸಂಘಗಳ ಸಮರಶೀಲ ಪಾತ್ರದ ಬಗ್ಗೆ ನಮಗೆ ತೃಪ್ತಿಯಿದ್ದರೂ, ನಾವು ಕೆಲವು ಸೋಲುಗಳನ್ನೂ ಕಂಡಿದ್ದೇವೆ. ದೈನಂದಿನ ಹೋರಾಟಗಳಲ್ಲಿ ಕೆಲವೊಮ್ಮೆ ಯಾವ ರಾಜಕೀಯ ಸಿದ್ಧಾಂತವೂ ಇಲ್ಲದ, ಕೇವಲ ಸಮರಶೀಲತೆಯ ಪ್ರದರ್ಶನ ಮಾಡುವ ರಾಜಕೀಯೇತರ ನಾಯಕರ ಕೈ ಮೇಲಾಗುವುದನ್ನು ಕಂಡಿದ್ದೇವೆ. ಮುಂಬೈ ಹಾಗೂ ಮಹಾರಾಷ್ಟ್ರ ಇದಕ್ಕೆ ಉತ್ತಮ ಉದಾಹರಣೆಗಳಾದರೂ ಉಳಿದೆಡೆಗಳಲ್ಲೂ ಇದೇ ಸಮಸ್ಯೆಯಿದೆ. ಈ ವಿದ್ಯಮಾನವನ್ನು ವಿಶ್ಲೇಷಿಸಲು ಸಿ.ಐ.ಟಿ.ಯು. ಅಥವಾ ರಾಜ್ಯ ಘಟಕಗಳು ಪ್ರಯತ್ನಿಸಿಲ್ಲ. ಹಿಂದೊಮ್ಮೆ ಮದ್ರಾಸಿನಲ್ಲಿ ಹೀಗೇ ಆಗಿತ್ತು. ಈಗ ಅಲ್ಲಿ ನಮ್ಮ ಸಂಗಾತಿಗಳು ಮತ್ತೆ ತಮ್ಮ ಪ್ರಭಾವ ಹರಡಲು ಸಾಧ್ಯವಾಗಿದೆ. ಅವರ ಅನುಭವದ ಪರಿಶೀಲನೆ ನಮಗೆ ಸಹಾಯಕವಾಗಬಹುದು.

ದೇಶದ ರಾಜಕೀಯ ಆಗುಹೋಗುಗಳಲ್ಲಿ, ಪ್ರತ್ಯೇಕತಾವಾದ, ಜಾತಿವಾದ, ಕೋಮುವಾದ ತಡೆಯುವಲ್ಲಿ ನಮ್ಮ ಸಂಘಗಳ ಪಾತ್ರ ಸುಮಾರಾಗಿ ಬಹಳ ಕಮ್ಮಿ. ದೇಶದ ಒಟ್ಟು ಕಾರ್ಮಿಕ ಆಂದೋಲನವನ್ನು ತಗೊಂಡರೆ ಇದು ಇನ್ನಷ್ಟು ಕಮ್ಮಿ.

ಹೈದರಾಬಾದ್‌ನಂತಹ ಆಂಧ್ರ ಪ್ರದೇಶದ ಕೈಗಾರಿಕಾ ಕೇಂದ್ರಗಳಲ್ಲಿ ಕಾರ್ಮಿಕ ಜನತೆ ಎಡಪಂಥೀಯವಲ್ಲದ ಪಕ್ಷಗಳಿಗೆ ಮತ ನೀಡಿರುವುದು ಈ ದೌರ್ಬಲ್ಯಕ್ಕೆ ಉದಾಹರಣೆ. ಹೀಗೇ ಮುಂದುವರಿದರೆ ಕಾರ್ಮಿಕ ಚಳುವಳಿ ಕೇವಲ ಒಂದು ವಿಭಾಗದ ಚಳುವಳಿಯಾಗಿ ಉಳಿದು ಕಾರ್ಮಿಕರು ಪ್ರತಿಕ್ರಿಯಾವಾದಿ ಶಕ್ತಿಗಳ ಆಟದ ಗೊಂಬೆಗಳಾಗಿ ಬಿಡಬಹುದು.

ತೃತೀಯ ಜಗತ್ತಿನ ಹಲವು ದೇಶಗಳಲ್ಲಿ ಕಾರ್ಮಿಕ ಸಂಘಗಳು ಸಾಮ್ರಾಜ್ಯಶಾಹೀ ಸಂಚನ್ನು ಎದುರಿಸಿ ಹೋರಾಡುತ್ತಿದ್ದರೆ ನಮ್ಮ ದೇಶದ ಕಾರ್ಮಿಕ ಚಳುವಳಿಯಲ್ಲಿ ಬಹಳಷ್ಟು ಜನ ಸಾಮ್ರಾಜ್ಯಶಾಹಿಯಿಂದ ಅಪಾಯವಿದೆಯೆಂದೇ ಒಪ್ಪುತ್ತಿಲ್ಲ. ಸಮಾಜವಾದಿ ದೇಶಗಳ ಬಗ್ಗೆ ಕಾರ್ಮಿಕರಲ್ಲಿ ಒಳ್ಳೆಯ ಅಭಿಪ್ರಾಯಗಳಿದ್ದರೂ. ಅಂತರ‌ರಾಷ್ಟ್ರೀಯ ಘಟನೆಗಳ ಬಗ್ಗೆ ಅವರ ಪ್ರಜ್ಞೆ ಇನ್ನೂ ದುರ್ಬಲವಾಗಿದೆ.

ಕಾರ್ಮಿಕರ ಮೇಲೆ ಬಂಡವಾಳಶಾಹಿಗಳ ದಾಳಿ ಹೊಸ ಹೊಸ ರೂಪವನ್ನು ತಳೆಯುತ್ತಿವೆ. ಇವನ್ನು ಎದುರಿಸಲು ಸಾಧ್ಯವಾಗುವಂತೆ ಇದುವರೆಗಿನ ಹೋರಾಟಗಳ ಅನುಭವದ ಅಧ್ಯಯನ ನಡೆಸಿ, ಹೊಸ ದಾಳಿಗಳನ್ನು ಹಿಮ್ಮೆಟ್ಟಿಸಲು ಸಮರ್ಥವಾದ ಹೋರಾಟಗಳ ಸ್ವರೂಪದ ಬಗ್ಗೆ ಯೋಚಿಸಬೇಕು. ಮುಷ್ಕರ ಇತ್ಯಾದಿ ನಡೆದಾಗ ಎಲ್ಲಾ ಪ್ರಜಾಪ್ರಭುತ್ವ ಶಕ್ತಿಗಳ ಬೆಂಬಲಪಡೆಯುವಲ್ಲಿ ನಾವೇಕೆ ವಿಫಲರಾಗುತ್ತಿದ್ದೇವೆ, ಆ ಬಗ್ಗೆ ಜಿದ್ದಾ ಸೀನ್ಯ "ಏಕೆ ತಳೆಯುತ್ತೇವೆ" ಎಂಬುದನ್ನೂ ಪರಿಶೀಲಿಸಬೇಕು.

ಸಿ.ಐ.ಟಿ.ಯು. ಸೇರಿದಂತೆ ಎಲ್ಲಾ ಕಾರ್ಮಿಕ ಸಂಘಟನೆಗಳು ಅಸಂಘಟಿತ ಕಾರ್ಮಿಕರ ದೊಡ್ಡ ವಿಭಾಗದ ಕಡೆಗೆ ಹೆಚ್ಚು ಗಮನಹರಿಸುತ್ತಿಲ್ಲ. ಪರಿಣಾಮವಾಗಿ ಈ ಸಮರಶೀಲ, ಧೈರ್ಯಶಾಲಿ ಹಾಗೂ ಸಶಕ್ತ ವಿಭಾಗ ಸಂಘಟಿತ ಚಳುವಳಿಯಿಂದ ದೂರವಿರುವಂತಾಗಿ ಪ್ರತಿಕ್ರಿಯಾವಾದಿಗಳು ನಮ್ಮ ವಿರುದ್ಧ ಅವರನ್ನು ಬಳಸಲು ಅವಕಾಶ ನೀಡಿದೆ. ಭಾರತದ ಕಾರ್ಮಿಕ ಚಳುವಳಿಯ ಇನ್ನೊಂದು ದೊಡ್ಡ ದೌರ್ಬಲ್ಯ– ಕೃಷಿ ಕಾರ್ಮಿಕರಿಂದ, ರೈತಾಪಿ ವರ್ಗದಿಂದ ಅದು ದೂರವಿರುವುದು. ಇದು ಹಿಂದಿನ ಬೂರ್ಜ್ವಾ ನಾಯಕರು ಬೆಳೆಸಿದ ಪ್ರಜ್ಞೆಯ ಪ್ರಭಾವ, ಸಿ.ಐ.ಟಿ.ಯು, ಸಮ್ಮೇಳನ ಮೊದಲು ತನ್ನನ್ನು ಸರಿಪಡಿಸಿಕೊಂಡು ಇತರರಲ್ಲಿಯೂ ಈ ರೋಗ ನಿವಾರಣೆಗೆ ಪ್ರಯತ್ನಿಸಬೇಕು.

ದುಡಿಯುವ ಮಹಿಳೆಯರ ಸಮಸ್ಯೆಗಳ ಬಗೆಗೆ ಉದಾಸೀನತೆಗೆ ಊಳಿಗಮಾನ್ಯ ದೃಷ್ಟಿಕೋನ ಕಾರಣ. ಜಗತ್ತಿನ ಇತರೆಡೆ ಈ ದೌರ್ಬಲ್ಯವನ್ನು ನೀಗಿಸಲಾಗುತ್ತಿದೆ. ಆದರೆ ನಾವಿನ್ನೂ ಹಿಂದಿದ್ದೇವೆ. ಸಿ.ಐ.ಟಿ.ಯು. ತನ್ನ ಕಳೆದ ಸಮ್ಮೇಳನದಲ್ಲಿ ಈ ದಿಕ್ಕಿನಲ್ಲಿ ಹೋರಾಟ ಆರಂಭಿಸಿತ್ತು. ಅದರ ಪರಿಶೀಲನೆ ನಡೆಯಬೇಕು.

ಕಾರ್ಮಿಕರ ಸೌಹಾರ್ದತೆಯನ್ನು ಮುರಿಯಲು ಸರಕಾರ ಹಾಗೂ ಉದ್ಯೋಗಪತಿಗಳು ಅವಲಂಬಿಸುವ ಇನ್ನೊಂದು ತಂತ್ರವೆಂದರೆ ಹೊಸದಾಗಿ ಸೇರುವ ಯುವಕ ಶ್ರಮಿಕನನ್ನು ಬಹಳಷ್ಟು ವರ್ಷ ತಾತ್ಕಾಲಿಕವಾಗಿಯೇ ದುಡಿಸಿಕೊಳ್ಳುವುದು. ಈ ವಿಶಿಷ್ಟ ವಿಭಾಗದ ಸಮಸ್ಯೆಗಳನ್ನು ಕಡೆಗಣಿಸುವ ಪ್ರವೃತ್ತಿಯೂ ಇದೆ. ವೈಯಕ್ತಿಕ ನಾಯಕತ್ವ ಕಾರ್ಮಿಕ ಚಳುವಳಿಯಲ್ಲಿ ಕಂಡು ಬರಲು ಇದೂ ಒಂದು ಕಾರಣ. ಈ ಬಗ್ಗೆ ಸಿ.ಐ.ಟಿ.ಯು. ಸಂಘಗಳು ಗಮನಹರಿಸಬೇಕು.

ಸಿ.ಐ.ಟಿ.ಯು. ಕಳೆದ ಸಮ್ಮೇಳನದಲ್ಲಿ ಎಲ್ಲಾ ಕಾರ್ಮಿಕ ಸಂಘಗಳ ಮಹಾಸಂಘದ ರಚನೆಗೆ ಹಾಗೂ ರಾಷ್ಟ್ರೀಯ ಆಂದೋಲನ ಸಮಿತಿಯ ವಿಸ್ತರಣೆಗೆ ಕರೆಕೊಟ್ಟಿತು. ಆ ಬಗ್ಗೆ ಗಂಭೀರ ಚರ್ಚೆ ನಡೆಸಬೇಕು. ಸರಕಾರದ ಕಾರ್ಮಿಕ ಹಾಗೂ ಆರ್ಥಿಕ ಧೋರಣೆಗಳಲ್ಲಿ ಕಾರ್ಮಿಕ ಸಂಘಗಳು ಮಧ್ಯ ಪ್ರವೇಶಿಸಿ ಜನತೆಯಲ್ಲಿ ಭರವಸೆ ಮೂಡಿಸುವ ಅಗತ್ಯವನ್ನು ಮನಗಾಣಬೇಕು.

ಇಂತಹ ಐಕ್ಯತೆ ಮೂಡಬೇಕಾದರೆ ಸಿ.ಐ.ಟಿ.ಯು.ನ ಸ್ವತಂತ್ರ, ಸಮರಶೀಲ ಚಟುವಟಿಕೆಗಳಿಂದ ಮಾತ್ರ ಸಾಧ್ಯ ಎಂಬುದನ್ನು ನಾವು ಅನುಭವದಿಂದ ಕಂಡುಕೊಂಡಿದ್ದೇವೆ. ಕಾರ್ಮಿಕ ಚಳುವಳಿ ಹೆಚ್ಚೆಚ್ಚು ಜನತೆಯ ಆರ್ಥಿಕ ಸಮಸ್ಯೆಗಳೆಡೆಗೆ, ಸರ್ವಾಧಿಕಾರೀ ಪ್ರವೃತ್ತಿಯ, ಪ್ರಜಾಪ್ರಭುತ್ವದ ಪ್ರಶ್ನೆಗಳ ಕಡೆಗೆ ಗಮನಹರಿಸಿ ಪ್ರಜಾಪ್ರಭುತ್ವ ಹಾಗೂ ಸಮಾಜವಾದಕ್ಕಾಗಿ ಹೋರಾಟದಲ್ಲಿ ಪ್ರಮುಖ ಶಕ್ತಿಯಾಗಬೇಕು. ಸಿ.ಐ.ಟಿ.ಯು. ಈ ದೃಷ್ಟಿಯಿಂದ ತನ್ನ ಚಟುವಟಿಕೆಗಳನ್ನು ಪರೀಕ್ಷಿಸಬೇಕು. ಎಂದು ಕಾ॰ ರಣದಿವೆ ಕರೆ ನೀಡಿದ್ದಾರೆ.

ಪಂಜಾಬ್ ಜನತೆಗೆ ಕೇಂದ್ರ ಸಮಿತಿಯ ಕರೆ

(ಒಂದನೇ ಪುಟದಿಂದ)

ಧಾರ್ಮಿಕ ಬೇಡಿಕೆಗಳನ್ನು ಒಪ್ಪಿಕೊಳ್ಳಲಾಗಿರುವುದರಿಂದ ಪಂಜಾಬಿ ಜನತೆಯ ನ್ಯಾಯಬದ್ಧ ಬೇಡಿಕೆಗಳ ಈಡೇರಿಕೆಗಾಗಿ ಇತರೆಲ್ಲಾ ರಾಜಕೀಯ ಪಕ್ಷಗಳೊಂದಿಗೆ ಅದು ಪ್ರಯತ್ನಿಸಬೇಕಾಗಿದೆ. ಆಗ ಮಾತ್ರ ಅವರು ದೇಶದ ಪ್ರಜಾಪ್ರಭುತ್ವ ಚಳುವಳಿಯ ಸಹಾನುಭೂತಿಯನ್ನು, ಬೆಂಬಲವನ್ನು ಗಳಿಸಿಕೊಳ್ಳಲು ಸಾಧ್ಯ.

ತ್ರಿಪಕ್ಷೀಯ ಸಮ್ಮೇಳನದಲ್ಲಿ ಎಲ್ಲಾ ಪ್ರಮುಖ ಬೇಡಿಕೆಗಳೂ ಇತ್ಯರ್ಥಗೊಂಡಿವೆ. ಕೆಲವಾರು ಸಣ್ಣಪುಟ್ಟ ಅಂಶಗಳು ಇತ್ಯರ್ಥವಾಗಬೇಕಾಗಿದೆ. ಕೇಂದ್ರ–ರಾಜ್ಯ ಸಂಬಂಧಗಳ ಪುನರ್ ಪರಿಶೀಲನೆ ಕುರಿತಾದ ಬೇಡಿಕೆಯನ್ನು ಸರ್ಕಾರಿಯಾ ಆಯೋಗವನ್ನು ರಚಿಸುವ ಮೂಲಕ ಒಪ್ಪಿಕೊಳ್ಳಲಾಗಿದೆ. ಜಲ ವಿವಾದ ಮತ್ತು ಗಡಿ ವಿವಾದಗಳಿಗೆ ಪರಿಹಾರ ಹುಡುಕುವುದು ಅಷ್ಟೇನೂ ಕಷ್ಟವಲ್ಲ. ಆದ್ದರಿಂದ ಕೇಂದ್ರ ಸರ್ಕಾರವು ತ್ರಿಪಕ್ಷೀಯ ಮಾತುಕತೆಗಳನ್ನು ಕೂಡಲೇ ಏರ್ಪಡಿಸಬೇಕು ಮತ್ತು ಅಕಾಲಿ ನಾಯಕರನ್ನು ಮಾತುಕತೆಗೆ ಆಹ್ವಾನಿಸಬೇಕೆಂದೂ ಕೇಂದ್ರ ಸಮಿತಿ ಒತ್ತಾಯಿಸಿದೆ. ಇದನ್ನು ಮತ್ತಷ್ಟು ವಿಳಂಬಗೊಳಿಸುವುದು ಅಪಾಯಕರವೆಂದು ಅದು ತಿಳಿಸಿದೆ.

ರಾಷ್ಟ್ರೀಯ ಐಕ್ಯತೆಯ ಮತ್ತು ಸಾಮ್ರಾಜ್ಯಶಾಹೀ ವಿರೋಧಿ ಪರಂಪರೆಗೆ ಬದ್ಧರಾಗಿ ತೀವ್ರಗಾಮಿ ಶಕ್ತಿಗಳನ್ನು ಸೋಲಿಸಲು ಒಂದಾಗಬೇಕೆಂದು ಕೇಂದ್ರ ಸಮಿತಿ ಪಂಜಾಬ್ ಜನತೆಗೆ ಕರೆ ನೀಡಿದೆ. ಜನತೆಯ ಒಗ್ಗಟ್ಟನ್ನು ಮುರಿಯುವ ಯಾವುದೇ ಪ್ರಯತ್ನಗಳು ಪ್ರತಿಗಾಮಿ ಶಕ್ತಿಗಳಿಗೂ ಸಾಮ್ರಾಜ್ಯಶಾಹೀ ಶಕ್ತಿಗಳಿಗೂ ಸಹಾಯ ಮಾಡುತ್ತದೆಂದು ಕೇಂದ್ರ ಸಮಿತಿ ಅಭಿಪ್ರಾಯಪಟ್ಟಿದೆ.

ಜಾತಿ ಮತ್ತು ರಾಜಕೀಯವೇ ?

(ಒಂದನೇ ಪುಟದಿಂದ)

ದಲಿತರ ಶೋಷಣೆಯನ್ನು ಘೋಷಣೆಯನ್ನಾಗಿ ಲಾಭ ಪಡೆಯುವ ಜನ ದಲಿತರಲ್ಲಿ ಹೆಚ್ಚಾಗಿ ಹುಟ್ಟಿಕೊಳ್ಳುತ್ತಿರುವುದನ್ನು ಕಾಣುತ್ತಿದ್ದೇವೆ. ದಲಿತರ ಸೇವೆಗಿಂತಲೂ ತಮ್ಮ ಸೇವೆಯಲ್ಲೇ, ಇವರೆಲ್ಲ ನಿರತರಾಗುತ್ತಾರೆ; ದಲಿತ ಚಳುವಳಿಯ ಲಾಭವನ್ನು ಸ್ವಂತಕ್ಕಾಗಿ ಉಪಯೋಗಿಸುತ್ತಿದ್ದಾರೆ.

ಶ್ರೇಷ್ಠ ನ್ಯಾಯಾಧೀಶ ಭೀಮಯ್ಯನವರ ಪರವಾಗಿ ಬಡ ದಲಿತರನ್ನುಪಯೋಗಿಸಿ ಬೊಬ್ಬಿಡುವುದು ದಲಿತ ವರ್ಗಕ್ಕಾಗಲೀ, ಭೀಮಯ್ಯನವರಿಗಾಗಲೀ ಶೋಭೆಯನ್ನುಂಟು ಮಾಡಲಾರದು. ವಕೀಲರುಗಳಾದರೂ ಇಂಥ ಸಮಸ್ಯೆಗಳನ್ನು ಬಯಲಿಗೆಳೆಯದೆ, ಕೋರ್ಟಿನ ಆವರಣದೊಳಗಡೆ ಪರಿಹರಿಸಿಕೊಂಡರೆ ನ್ಯಾಯಾಂಗದ ಕುರಿತು ಜನರಿಗಿರುವ ಅಭಿಮಾನ ಉಳಿಯುತ್ತದೆ. ಆದ್ದರಿಂದ ಭೀಮಯ್ಯನವರ ಪ್ರಕರಣ ಈ ರೀತಿ ಬೆಳೆಯಬಾರದಾಗಿತ್ತೆಂದು ನಮ್ಮ ಅಭಿಪ್ರಾಯ.

Printed & Published by P. Ramachandra Rao by him on behalf of the Communist Party of India (Marxist) Karnataka State Committee L-56 K. V. Temple Street Sultanpet, Bangalore 560053. Editorial and managerial office : L-56, K. V. Temple Street, Sultanpet, B-53. Phone : 24154
Printed at Karnataka Pressmen Associates (P) Limited, 54/1, K. R. Road, Bangalore-4 Editor : P. RAMACHANDRARAO